ವಿಜಯಪುರ | ಸಂಪುಟ 04 | ಸಂಚಿಕೆ 141 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಶನಿವಾರ, ಜುಲೈ, 25, 2026

"ಯುವಕರ ನ್ಯಾಯಯುತ ಹೋರಾಟವನ್ನು ಗೌರವಿಸಿ ಅವರ ನ್ಯಾಯಸಮ್ಮತವಾದ ಬೇಡಿಕೆಗಳನ್ನು ಈಡೇ-ರಿಸಬೇಕಾದದ್ದು ಸರಕಾರದ ನೈತಿಕ ಜವಾಬ್ದಾರಿ. ಆದರೆ ಬೇಡಿಕೆಗಳನ್ನು ಹತ್ತಿಕ್ಕುವ ಪ್ರಜಾಪ್ರಭುತ್ವ ವಿರೋಧಿ ನಿಲುವು ತಳೆದಿರುವ ಕೇಂದ್ರ ಸರಕಾರದ ವರ್ತನೆ ನಿಜಕ್ಕೂ ಅಪಾಯಕಾರಿ."



■ ಸಂಗಮೇಶ ಬಬಲೇಶ್ವರ
ನಿಕಟಪೂರ್ವ ಅಧ್ಯಕ್ಷರು, ಕರ್ನಾಟಕ ಬಾಲವಿಕಾಸ ಅಕಾಡೆಮಿ

ಮಹಾರಾಷ್ಟ್ರದಲ್ಲಿ ವರುಣನ ಅಬ್ಬರ | ಈ ವರ್ಷ ಮೊದಲ ಬಾರಿ 14 ಗೇಟ್ ತೆರೆದು ನೀರು ಹರಿಬಿಡುವಿಕೆ | ನದಿ ತೀರಕ್ಕೆ ಜನ-ಜಾನುವಾರು ಸುಳಿಯದಂತೆ ಸೂಚನೆ

# ಆಲಮಟ್ಟಿ ಡ್ಯಾಂನಿಂದ 67,500 ಕ್ಯೂಸೆಕ್ ನೀರು ಬಿಡುಗಡೆ

■ ಉದಯರಶ್ಮಿ ದಿನಪತ್ರಿಕೆ

ಆಲಮಟ್ಟಿ: ಒಳಹರಿವು ಹೆಚ್ಚಳದ ಹಿನ್ನೆಲೆಯಲ್ಲಿ ಈ ವರ್ಷದಲ್ಲಿ ಮೊದಲ ಬಾರಿಗೆ ಆಲಮಟ್ಟಿ ಜಲಾಶಯದ 14 ಗೇಟ್‌ಗಳನ್ನು ಶುಕ್ರವಾರದಿಂದ ತೆರೆದು ಕೃಷ್ಣಾ ನದಿ ಪಾತ್ರಕ್ಕೆ ನೀರು ಬಿಡಲಾಗುತ್ತಿದೆ.

ಜಲಾಶಯದ ಬಲಭಾಗದ ಆಲಮಟ್ಟಿ ವಿದ್ಯುತ್ ಉತ್ಪಾದನಾ ಘಟಕದ ಮೂಲಕ 42,500 ಕ್ಯೂಸೆಕ್ ಮತ್ತು ಗೇಟ್‌ಗಳ ಮೂಲಕ 25,000 ಕ್ಯೂಸೆಕ್ ಸೇರಿ ಒಟ್ಟು 67,500 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ.

ಗುರುವಾರ 42,500 ಕ್ಯೂಸೆಕ್ ಇದ್ದ ಹೊರಹರಿವನ್ನು ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಹೆಚ್ಚಿಸಲಾಯಿತು.

ಗರಿಷ್ಠ 519.60 ಮೀಟರ್ ಎತ್ತರದಲ್ಲಿ 123.081 ಟಿಎಂಸಿ ನೀರು ಸಂಗ್ರಹಣಾ ಸಾಮರ್ಥ್ಯದ ಜಲಾಶಯದಲ್ಲಿ ಶುಕ್ರವಾರ 518.60 ಮೀಟರ್ ಎತ್ತರದಲ್ಲಿ ಒಟ್ಟು 106.32 ಟಿಎಂಸಿ ನೀರು ಸಂಗ್ರಹವಾಗಿತ್ತು. ಒಳಹರಿವು 73,162 ಕ್ಯೂಸೆಕ್ ಇತ್ತು.

## 270 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ

ಜಲಾಶಯದ ಬಲಭಾಗದ ಆಲಮಟ್ಟಿ ವಿದ್ಯುತ್ ಉತ್ಪಾದನಾ ಘಟಕದಲ್ಲಿ ಎಲ್ಲಾ 6 ಘಟಕಗಳ ಮೂಲಕ 270 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ ಎಂದು ಕೆಪಿಸಿಎಲ್ ಮೂಲಗಳು ತಿಳಿಸಿವೆ.

**ಆಲಮಟ್ಟಿ ಜಲಾಶಯದ ನೀರಿನ ಮಾಹಿತಿ**

- ಗರಿಷ್ಠ ಸಾಮರ್ಥ್ಯ: 123.081 ಟಿಎಂಸಿ
- ಇಂದಿನ ಸಂಗ್ರಹ: 106.323 ಟಿಎಂಸಿ
- ಗರಿಷ್ಠ ಎತ್ತರ: 519.60 ಮೀ.
- ಇಂದಿನ ಮಟ್ಟ: 518.60 ಮೀ.
- ಒಳಹರಿವು: 73,162 ಕ್ಯೂಸೆಕ್
- ಹೊರಹರಿವು: 67,500 ಕ್ಯೂಸೆಕ್



ಮಹಾರಾಷ್ಟ್ರದಲ್ಲಿ ಮಳೆ ಮಹಾರಾಷ್ಟ್ರದ ಪಶ್ಚಿಮ ಘಟ್ಟಗಳಲ್ಲಿ ವರುಣನ ಅಬ್ಬರ ಮುಂದುವರೆದಿದೆ. ಕೊಯ್ನಾ 77 ಮಿ.ಮೀ, ನವಜಾ 66 ಮಿ.ಮೀ, ಮಹಾಬಳೇಶ್ವರ 78 ಮಿ.ಮೀ, ರಾಧಾನಗರಿ 24 ಮಿ.ಮೀ, ಧೂದಗಂಗಾ 48 ಮಿ.ಮೀ ಮಳೆಯಾಗಿದೆ. ಗುರುವಾರಕ್ಕಿಂತ ಶುಕ್ರವಾರ ಮಳೆಯ ಪ್ರಮಾಣ ಕಡಿಮೆಯಾಗಿದೆ. ಕೃಷ್ಣಾ ನದಿಗೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದೆ. ಕಲ್ಲೋಳ ಬ್ಯಾರೇಜ್‌ನಿಂದ ಹೆಚ್ಚಿನ ನೀರನ್ನು ಕೃಷ್ಣಾ ನದಿಗೆ ಹರಿಸುತ್ತಿರುವುದ-ರಿಂದ ಆಲಮಟ್ಟಿ ಜಲಾಶಯಕ್ಕೆ ಒಳಹ-ರಿವಿನ ಪ್ರಮಾಣ ಅಧಿಕವಾಗಿದೆ. ಹವಾಮಾನ ಇಲಾಖೆಯ ಮುನ್ಸೂಚನೆ ಮತ್ತು ಮೇಲ್ಭಾಗದ ಜಲಾನಯನ ಪ್ರದೇಶದಲ್ಲಿ ಸುರಿಯುತ್ತಿರುವ ಮಳೆಯನ್ನು ಪರಿಗಣಿಸಿದರೆ, ಮುಂದಿನ ದಿನಗಳಲ್ಲಿ ಜಲಾಶಯಕ್ಕೆ ಒಳಹರಿವು ಇನ್ನಷ್ಟು ಹೆಚ್ಚುವ ಸಾಧ್ಯತೆ ಇದೆ.

ಈ ಹಿನ್ನೆಲೆಯಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ನೀರಿನ ಹೊರಹ-ರಿವಿನ ಪ್ರಮಾಣವನ್ನು ಅಗತ್ಯವಿದ್ದರೆ ಮತ್ತಷ್ಟು ಪರಿಷ್ಕರಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

"ಜಲಾಶಯದಿಂದ 4 ಲಕ್ಷ ಕ್ಯೂಸೆಕ್‌ಗಿಂತ ಹೆಚ್ಚಿನ ಪ್ರಮಾಣದಲ್ಲಿ ನೀರು ಹ-ರಿಬಿಟ್ಟಾಗ ಮಾತ್ರ ತಾಲ್ಲೂಕಿನ ಮಸೂತಿ ಗ್ರಾಮದ ಜನವಸತಿ ಪ್ರದೇಶಕ್ಕೆ ಸ್ವಲ್ಪ ನೀರು ಬರುತ್ತದೆ. ಉಳಿದಂತೆ ತಾಲ್ಲೂಕಿನ ಯಾವುದೇ ಜನವಸತಿ ಪ್ರದೇಶಗಳಿಗೆ ನೀರು ನುಗ್ಗುವುದಿಲ್ಲ. ಮುಂಜಾಗ್ರತೆ ಕ್ರಮವಾಗಿ ಈಜುಗಾರರು, ಉರಗ ತಜ್ಞರು, ಸುಸಜ್ಜಿತ ಬೋಟ್‌ಗಳನ್ನು ಗುರುತು ಮಾಡಿಟ್ಟುಕೊಳ್ಳಲಾಗಿದೆ."

■ ಎ.ಡಿ. ಅಮರಾವದಗಿ
ತಹಶೀಲ್ದಾರ್

## ನದಿ ತೀರಕ್ಕೆ ಜನ-ಜಾನುವಾರು ಸುಳಿಯದಂತೆ ಸೂಚನೆ

ಜಲಾಶಯದಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಬಿಡುಗಡೆ ಮಾಡುತ್ತಿರುವುದ-ರಿಂದ ಆಲಮಟ್ಟಿಯಿಂದ ಕೆಳಭಾಗದ ಕೃಷ್ಣಾ ನದಿಪಾತ್ರದ ಗ್ರಾಮಗಳ ನಿವಾಸಿಗಳು, ರೈತರು, ಮೀನುಗಾರರು ಮತ್ತು ಸಾರ್ವಜನಿಕರು ನದಿಯ ದಡಕ್ಕೆ ಅನಗತ್ಯವಾಗಿ ತೆರಳದಂತೆ, ಜಾನುವಾರುಗಳನ್ನು ನದಿಗೆ ಇಳಿಸದಂತೆ ಹಾಗೂ ಮಕ್ಕಳನ್ನು ನದಿಯ ಸಮೀಪ ಬಿಡದಂತೆ ಜಲಾಶಯ ಆಡಳಿತ ಮನವಿ ಮಾಡಿದೆ.ಸಂಬಂಧಿಸಿದ ತಾಲ್ಲೂಕು ಮತ್ತು ಗ್ರಾಮ ಮಟ್ಟದ ಅಧಿಕಾರಿಗಳು ಸಾರ್ವಜನಿಕರಿಗೆ ಮುನ್ನೆಚ್ಚರಿಕೆ ನೀಡುವಂತೆ ಸೂಚಿಸಲಾಗಿದೆ. ನದಿ ತೀರಕ್ಕೆ ಜನ-ಜಾನುವಾರು ಸುಳಿಯದಂತೆ ಡಂಗೂರ ಸಾರುವುದು ಮತ್ತು ಧ್ವನಿವರ್ಧಕ ಮೂಲಕ ಜನರನ್ನು ಎಚ್ಚರಿಸಲಾಗುತ್ತಿದೆ.

ಶೈಕ್ಷಣಿಕ ಚಟುವಟಿಕೆ-ವಸತಿ ವ್ಯವಸ್ಥೆ ಪರಿಶೀಲನೆ | ಮಕ್ಕಳೊಂದಿಗೆ ಸಹಪಂಕ್ತಿ ಭೋಜನ

# ಕಾರಜೋಳ ವಸತಿ ಶಾಲೆಗೆ ಡಿಸಿ ಡಾ.ಆನಂದ್ ಭೇಟಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಕಾರಜೋಳದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಭೇಟಿ ನೀಡಿ, ಶಾಲೆಯ ಶೈಕ್ಷಣಿಕ ಚಟುವಟಿಕೆಗಳು ಹಾಗೂ ವಸತಿ ವ್ಯವಸ್ಥೆ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಶಾಲೆಯ ವಿದ್ಯಾರ್ಥಿಗಳೊಂದಿಗೆ ಆತ್ಮೀಯವಾಗಿ ಸಂವಾದ ನಡೆಸಿದ ಜಿಲ್ಲಾಧಿಕಾ-ರಿಗಳು, ಮಕ್ಕಳೊಂದಿಗೆ ಊಟ ಮಾಡಿ ಆಹಾರದ ಗುಣಮಟ್ಟ ಪರಿಶೀಲಿಸಿದರು.

ಬಳಿಕ ಮಾತನಾಡಿದ ಜಿಲ್ಲಾಧಿಕಾರಿಗಳು, ವಸತಿ ಶಾಲೆಯಲ್ಲಿರುವ ವಿದ್ಯಾರ್ಥಿಗಳಿಗೆ ನಿತ್ಯ ಗುಣಮಟ್ಟದ ಶಿಕ್ಷಣ, ಪೌಷ್ಟಿಕ ಆಹಾರ ಹಾಗೂ ಉತ್ತಮ ಸೌಲಭ್ಯ ಒದಗಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜೊತೆಗೆ ವಸತಿ ಶಾಲೆಯಲ್ಲಿರುವ ತಂಗಿರುವ ವಿದ್ಯಾರ್ಥಿಗಳಿಗೆ ಊಟ ಹಾಗೂ ಉಪಹಾರದ ವ್ಯವಸ್ಥೆಯಲ್ಲಿ ನಿಲಯದ ನಿಲಯ ಪಾಲಕರು, ಪ್ರಾಚಾರ್ಯರು ಹಾಗೂ ಶಿಕ್ಷಕರು ವಿಶೇಷ ಮುತುವರ್ಜಿ ವಹಿಸಬೇಕು. ಶುಚಿತ್ವ ಮತ್ತು ಸ್ವಚ್ಛತೆಗೆ ಆದ್ಯತೆ ನೀಡುವುದು ಸೇರಿದಂತೆ ಶಿಕ್ಷಕರು ರೂಢಿಸಿಕೊಳ್ಳಬೇಕಾದ ಕೌಶಲ್ಯಗಳ ಕುರಿತು ಪ್ರಾಚಾರ್ಯರು ಹಾಗೂ ಸಿಬ್ಬಂದಿಗೆ ಜಿಲ್ಲಾಧಿಕಾರಿ ಸೂಚಿಸಿದರು.ಬಳಿಕ ಮಕ್ಕಳ ಸ್ನಾನ ಕೋಣೆ ಹಾಗೂ ಶೌಚಾಲಯ ಸೌಲಭ್ಯಗಳ ಲಭ್ಯತೆ ಬಗ್ಗೆ ಮಾಹಿತಿ ಪಡೆದುಕೊಂಡರು. ಮಕ್ಕಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ಸಲಹೆ ಮಾಡಿದರಲ್ಲದೆ,

ವಿದ್ಯಾರ್ಥಿಗಳಿಗೆ ಚೆನ್ನಾಗಿ ಅಭ್ಯಾಸ ಮಾಡಲು ಕಿವಿಮಾತು ಹೇಳಿದರು. ಈ ಸಂದರ್ಭದಲ್ಲಿ ಶಾಲೆಯ ಪ್ರಾಚಾರ್ಯರು, ನಿಲಯ ಪಾಲಕರು, ಶಿಕ್ಷಕರು ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

# ಯುವಕರನ್ನು ಕೆಣಕಿದವರಾರೂ ಉದ್ಧಾರವಾಗಿಲ್ಲ :ಎಂಎಲ್ಸಿ ಸುನೀಲಗೌಡ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಯುವಕರನ್ನು ಯಾರೂ ಕೆಣಕಬಾರದು. ಅವರನ್ನು ಕೆಣಕಿದವರಾರೂ ಉದ್ಧಾರವಾಗಿಲ್ಲ ಎಂದು ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಹೇಳಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಭಾರತ ಯುವಕರ ದೇಶ. ಯುವಕರು ದೇಶದ ಶಕ್ತಿ. ದೇಶದ ಭವಿಷ್ಯ ಯುವಕರ ಮೇಲೆ ನಿಂತಿದೆ. ಅವರು ಮನಸ್ಸು ಮಾಡಿದರೆ ಇತಿಹಾಸ ರಚಿಸಬಲ್ಲರು ಎಂದು ಅವರು ತಿಳಿಸಿದ್ದಾರೆ.

ದೇಶದಲ್ಲಿ ಪ್ರತಿವರ್ಷ 20 ಲಕ್ಷಕ್ಕೂ ಹೆಚ್ಚು ಯುವಕರು ಸ್ಪರ್ಧಾತ್ಮಕ ಪರೀಕ್ಷೆ ಬರೆಯುತ್ತಿದ್ದು, ಅದಕ್ಕಾಗಿ ಹಗಲು- ರಾತ್ರಿ ಶ್ರಮವಹಿಸಿ ತಯಾರಿ ನಡೆಸುತ್ತಾರೆ. ಆದರೆ, ಪ್ರಶ್ನೆ ಸೋರಿಕೆಯಂಥ ಘಟನೆಗಳು ವಿದ್ಯಾರ್ಥಿಗಳು ಮಾತ್ರವಲ್ಲ ಅವರ ಪೋಷಕರ ಕನಸು ಮತ್ತು ಶ್ರಮವನ್ನೂ ನುಚ್ಚುನೂರು ಮಾಡುತ್ತವೆ. ಈಗ ದೇಶಾದ್ಯಂತ ಯುವಕರು ತಮಗಾಗಿರುವ ಅನ್ಯಾಯದ ವಿರುದ್ಧ ನೋವನ್ನು ಪ್ರತಿಭಟನೆಯ ರೂಪದಲ್ಲಿ ಹೊರ ಹಾಕುತ್ತಿದ್ದಾರೆ. ಆದರೆ, ಕೇಂದ್ರ ಸರಕಾರ ಈ ಪ್ರತಿಭಟನೆಯನ್ನು ನಿರ್ವಹಿಸುತ್ತಿರುವ ರೀತಿ ಖಂಡನೀಯವಾಗಿದೆ. ದೇಶದ ಭವಿಷ್ಯ ಎಂದೇ ಪರಿಗಣಿಸಲಾಗುವ ಯುವಕರು ನಮ್ಮ ಮಕ್ಕಳಿದ್ದಂತೆ. ಇಂಥ ಕಠಿಣ ಪರಿಸ್ಥಿತಿಯಲ್ಲಿ ನಾವೆಲ್ಲರೂ ಯುವಜನತೆಯೊಂದಿಗೆ ಪಕ್ಷಾತೀತವಾಗಿ ಬೆಂಬಲವಾಗಿ ನಿಲ್ಲಬೇಕಾಗಿದೆ. ಯುವಕರ ಭಾವನೆಗಳು ಮತ್ತು ವ್ಯಕ್ತಪಡಿಸುತ್ತಿರುವ ನೋವಿಗೆ ನಾವೆಲ್ಲರೂ ದನಿಗೂಡಿಸಬೇಕಾಗಿದೆ ಎಂದು ಅವರು ತಿಳಿಸಿದ್ದಾರೆ.

ಯುವಶಕ್ತಿಯನ್ನು ದೇಶದ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಬೇಕು. ಅವರ ಆಶೋತ್ತರಗಳಿಗೆ ಸ್ಪಂದಿಸಬೇಕು. ಅವರ ಬೇಡಿಕೆಗಳ ಕಡೆಗೆ ಗಮನ ಹರಿಸಬೇಕು. ಹಳೆಯ ಬೇರು ಮತ್ತು ಹೊಸ ಚಿಗುರು ಪರಸ್ಪರ ಒಂದಾಗಿ ಮುಂದುವರೆದಾಗ ಮಾತ್ರ ದೇಶದಲ್ಲಿ ಸಮೃದ್ಧಿ ಸಾಧ್ಯ. ನಾವೆಲ್ಲರೂ ಅವರೊಂದಿಗೆ ನಿಲ್ಲಬೇಕು. ಅವರ ಬೇಡಿಕೆಗಳಿಗೆ ಕೇಂದ್ರ ಸರಕಾರ ಸ್ಪಂದಿಸಬೇಕು ಎಂದು ಶಾಸಕ ಸುನೀಲಗೌಡ ಪಾಟೀಲ ತಿಳಿಸಿದ್ದಾರೆ.

# ಯುವಕರ ನ್ಯಾಯಯುತ ಹೋರಾಟ ಗೌರವಿಸಿ :ಬಬಲೇಶ್ವರ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: "ಯುವಕರ ನ್ಯಾಯಯುತ ಹೋರಾಟವನ್ನು ಗೌರವಿಸಿ ಅವರ ನ್ಯಾಯಸಮ್ಮತವಾದ ಬೇಡಿಕೆಗಳನ್ನು ಈಡೇರಿಸಬೇಕಾದದ್ದು ಸರಕಾರದ ನೈತಿಕ ಜವಾಬ್ದಾರಿಯಾಗಿದೆ. ಯುವಕರ ನ್ಯಾಯಯುತವಾದ ಬೇಡಿಕೆಗಳನ್ನು ಹತ್ತಿಕ್ಕುವ ಪ್ರಜಾಪ್ರಭುತ್ವ ವಿರೋಧಿ ನಿಲುವು ತಳೆದಿರುವ ಕೇಂದ್ರ ಸರಕಾರದ ವರ್ತನೆ ನಿಜಕ್ಕೂ ಅಪಾಯಕಾರಿ ಮತ್ತು ಆತ್ಮಹತ್ಯಾದಾಯಕ ಬೆಳವಣಿಗೆಯಾಗಿದೆ ಎಂದು ಕರ್ನಾಟಕ ರಾಜ್ಯ ಬಾಲವಿಕಾಸ ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪತ್ರಿಕಾ ಪ್ರಕಟಣೆ ನೀಡಿರುವ ಅವರು " ಅನ್ಯಾಯವನ್ನು ಪ್ರತಿಭಟಿಸುವುದು ಪ್ರತಿಯೊಬ್ಬ ಭಾರತೀಯ ನಾಗರಿಕನ ಹಕ್ಕಾಗಿದೆ. ನೀಟ್ ಪರೀಕ್ಷೆಯಲ್ಲಿ ಆಗಿರುವ ಅವಾಂತರದಿಂದ ಹಲವಾರು ಜನ ಯುವಕ ಯುವತಿಯರು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಇದಕ್ಕೆ ಉತ್ತರಿಸಬೇಕಾದ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ ಎಲ್ಲಿ ಅಡಗಿ ಕುಳಿತಿ-ದ್ದಾರೆ.ಸರಕಾರಕ್ಕೆ ನೈತಿಕತೆ ಇದ್ದರೆ ತಕ್ಷಣ ಅವರ ರಾಜೀನಾಮೆ ಪಡೆದುಕೊಂಡು,ಪ್ರಧಾನ ಮಂತ್ರಿಗಳು ದೇಶದ ಯುವಕರ ಭವಿಷ್ಯದ ಜೊತೆ ಚಲ್ಲಾಟವಾಡಿದ್ದಕ್ಕೆದೇಶದ ಯುವಕರ ಮತ್ತು ಸಮಸ್ತ ದೇಶದ ಜನತೆಯ ಕ್ಷಮೆಯಾಚಿಸಬೇಕು.ಬಾಳಿ ಬೆಳಗಬೇಕಾಗಿದ್ದ ಹಲವಾರು ಪ್ರತಿಭಾವಂತ ಯುವಕ ಯುವತಿಯರ ಸಾವಿಗೆ ಕಾರಣ-ರಾದವರನ್ನು ತಕ್ಷಣ ಭಂದಿಸಿ, ದೇಶದ ಯುವಕರಿಗೆ ನ್ಯಾಯವದಗಿಸಿ ಕೊಡಬೇಕು ಎಂದು ಸಂಗಮೇಶ ಬಬಲೇಶ್ವರ ಆಗ್ರಹಿಸಿದ್ದಾರೆ

# ಕಾಂಗ್ರೆಸ್ ಸರ್ಕಾರದ ದಬ್ಬಾಳಿಕೆ ತಡೆಗೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ದಬ್ಬಾಳಿಕೆ ನಿಯಂತ್ರಿಸುವುದು ಹಾಗೂ ರಾಷ್ಟ್ರದಲ್ಲಿ ಕೆಲವೊಂದು ದುಷ್ಟ ಶಕ್ತಿಗಳು ಕಾನೂನು-ಸುವ್ಯವಸ್ಥೆಯ ಹಾಳು ಮಾಡುತ್ತಿವೆ ಎಂದು ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಶುಕ್ರವಾರ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿದರು.

ನಗರದ ಡಾ.ಬಿ.ಆರ್. ಅಂಬೇಡ್ಕರ ವೃತ್ತದಿಂದ ಆರಂಭಗೊಂಡ ರ್‍ಯಾಲಿ ವಿವಿಧ ಪ್ರಮುಖ ಮಾರ್ಗಗಳಲ್ಲಿ ಸಂಚರಿಸಿ ಜಿಲ್ಲಾಧಿಕಾರಿಗಳ ಕಚೇರಿ ತಲುಪಿತು. ನಂತರ ಈ ವಿಷಯದಲ್ಲಿ ಮಧ್ಯ ಪ್ರವೇಶಿಸಿ ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಮುನ್ನಚ್ಚರಿಕೆ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ರಾಜ್ಯಪಾಲರಿಗೆ ಲಿಖಿತ ಮನವಿಯನ್ನು ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಿದರು.

ನೇತೃತ್ವ ವಹಿಸಿದ್ದ ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಮಾತನಾಡಿ, ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದುಬಿದ್ದಿದ್ದು, ರಾಜ್ಯಾದ್ಯಂತ ಅಕ್ಷರಶಃ ಗೂಂಡಾ ರಾಜ್ ಸೃಷ್ಟಿಯಾಗಿದೆ. ಆಡಳಿತ ಪಕ್ಷದ ಕುಮ್ಮಕ್ಕಿನಿಂದ ಸಮಾಜಘಾತುಕ ಶಕ್ತಿಗಳು ಮತ್ತು ಗೂಂಡಾಗಳು ರಾಜಾರೋಷವಾಗಿ ಮೆರೆಯುತ್ತಿದ್ದಾರೆ. ವಿರೋಧ ಪಕ್ಷದ ನಾಯಕರು, ನಮ್ಮ ಪಕ್ಷದ ಕಾರ್ಯಕರ್ತರು ಹಾಗೂ ಸರ್ಕಾರದ ಜನವಿರೋಧಿ ನೀತಿಗಳನ್ನು ಪ್ರಶ್ನಿಸುವ ಸಾರ್ವಜನಿಕರ ಮೇಲೆ ನಿರಂತರ ದೌರ್ಜನ್ಯ, ಬೆದರಿಕೆ ಹಾಗೂ ಹಲ್ಲೆಗಳು ನಡೆಯುತ್ತಿವೆ ಎಂದು ಅಸಮಾಧಾನ ಹೊರಹಾಕಿದರು.




ಮಾಜಿ ಶಾಸಕ ರಮೇಶ ಭೂಸನೂರ ಮಾತನಾಡಿ, ರಕ್ಷಣೆ ನೀಡಬೇಕಾದ ಪೊಲೀಸ್ ಇಲಾಖೆಯು ಆಡಳಿತ ಪಕ್ಷದ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದು, ದೂರು ನೀಡಿದರೂ ಕಿಡಿಗೇಡಿಗಳ ಮೇಲೆ ಯಾವುದೇ ಕಾನೂನು ಕ್ರಮ ಜರುಗಿಸುತ್ತಿಲ್ಲ. ವಿರೋಧದ ದನಿಯನ್ನು ಅಡಗಿಸುವ ದಮನಕಾರಿ ನೀತಿಯನ್ನು ಸರ್ಕಾರ ಅನುಸರಿಸುತ್ತಿದೆ. ಇದರಿಂದ ಜನಸಾಮಾನ್ಯರು, ಮಹಿಳೆಯರು ಭೀತಿಯ ವಾತಾವರಣದಲ್ಲಿ ಬದುಕುವಂತಾಗಿದೆ ಎಂದರು.

ಸಾವಯವ ಬೀಜ ಪ್ರಮಾಣನ ಸಂಸ್ಥೆ ಮಾಜಿ ಅಧ್ಯಕ್ಷ ವಿಜುಗೌಡ ಪಾಟೀಲ ಮಾತನಾಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಸಾಬು ಮಾಶ್ಯಾಳ, ಮಳುಗೌಡ ಪಾಟೀಲ, ಈರಣ್ಣ ರಾವೂರ, ಕಾಸುಗೌಡ ಬಿರಾದಾರ, ಸಂಜೀವ ಐಹೊಳೆ, ಉಮೇಶ ಕಾರಜೋಳ, ಸುರೇಶ ಬಿರಾದಾರ, ಗೋಪಾಲ ಘಟಕಾಂಬಳೆ, ವಿವೇಕಾನಂದ ಡಬ್ಬಿ, ಮಹೇಂದ್ರಕುಮಾರ ನಾಯಕ, ಭೀಮಾಶಂಕರ ಹದನೂರ, ಉಮೇಶ ಕೋಳಕೂರ, ಕೃಷ್ಣಾ ಗುನ್ನಾಳಕರ, ಚಿದಾನಂದ ಚಲವಾದಿ, ಮಲ್ಲಿಕಾರ್ಜುನ ಜೋಗೂರ, ಸ್ವಪ್ನಾ ಕಣಮುಚನಾಳ, ರಾಹುಲ ಜಾಧವ, ಮಹೇಶ ಒಡೆಯರ, ರಾಜಶೇಖರ ಮಗಿಮಠ, ಮಂಜುನಾಥ ಮಿಸೆ, ರವಿಕಾಂತ ಬಗಲಿ, ರಾಘವೇಂದ್ರ ಕಾಪಸೆ, ರವಿಕಾಂತ ವಗ್ಗೆ, ಸಚೀನ ಬೋಂಬಳೆ, ಭೀಮಸಿಂಗ ರಾಠೋಡ, ಸಂದೀಪ ಪಾಟೀಲ, ಸಂತೋಷ ಪಾಟೀಲ ಡಂಬಳ, ಚಂದ್ರಶೇಖರ ಪಾಟೀಲ, ಸಿದ್ದಗೊಂಡ ಬಿರಾದಾರ, ಸಂತೋಷ ಕುರದಡ್ಡಿ, ಹಣಮಂತ್ರಾಯಗೌಡ ಪಾಟೀಲ ಪಾಲ್ಗೊಂಡಿದ್ದರು.

ಏಕಲಮಟ್ಟಿ ಏತ ನೀರಾವರಿ ಯೋಜನೆ ಪೂರ್ಣಗೊಳಿಸುವಂತೆ ಆಗ್ರಹಿಸಿ ಅರೆಬೆತ್ತಲೆ ಮೆರವಣಿಗೆ | ರಸ್ತೆ ತಡೆ | ಉರುಳು ಸೇವೆ | ರಸ್ತೆ ಮಧ್ಯೆಯೇ ಅಡುಗೆ ಮಾಡಿ ಊಟ

# 13 ವರ್ಷ ಕಳೆದರೂ ನೀರಿಲ್ಲ: ಚಿಕ್ಕಲಕಿ ಕ್ರಾಸ್‌ನಲ್ಲಿ ರೈತರ ಆಕ್ರೋಶ ಸ್ಫೋಟ

■ ಉದಯರಶ್ಮಿ ದಿನಪತ್ರಿಕೆ

ಜಮಖಂಡಿ: ಬಹುನಿರೀಕ್ಷಿತ ಚಿಕ್ಕಲಕಿ ತೊದಲಬಾಗಿ ಏಕಲಮಟ್ಟಿ ಏತ ನೀರಾವರಿ ಯೋಜನೆ ಕಾಮಗಾರಿ ಆರಂಭವಾಗಿ ಸುಮಾರು 13 ವರ್ಷಗಳು ಕಳೆದರೂ ರೈತರ ಜಮೀನುಗಳಿಗೆ ಇನ್ನೂ ನೀರು ಹರಿಯದಿರುವುದನ್ನು ಖಂಡಿಸಿ ಶುಕ್ರವಾರ ಜಮಖಂಡಿ ತಾಲೂಕಿನ ಚಿಕ್ಕಲಕಿ ಕ್ರಾಸ್‌ನಲ್ಲಿ ರೈತರು ಬೃಹತ್ ಪ್ರತಿಭಟನೆ ನಡೆಸಿದರು.

ಸರ್ಕಾರ ಹಾಗೂ ಸಂಬಂಧಿತ ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ ರೈತರು ವಿಜಯಪುರಧಾರವಾಡ ಮುಖ್ಯ ಹೆದ್ದಾರಿಯನ್ನು ತಡೆದು ವಿಭಿನ್ನ ರೀತಿಯಲ್ಲಿ ಪ್ರತಿಭಟನೆ ನಡೆಸಿ, ನೂರಾರು ರೈತರು ಎತ್ತುಗಾಡಿಗಳೊಂದಿಗೆ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ, ಕೆಲವರು ಅರೆಬೆತ್ತಲೆ ಮೆರವಣಿಗೆ, ಮತ್ತಷ್ಟು ರೈತರು ಉರುಳು ಸೇವೆ ಸಲ್ಲಿಸುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯ ತೀವ್ರತೆ ಹೆಚ್ಚಿದ ವೇಳೆ ರಸ್ತೆ ಮಧ್ಯೆಯೇ ಚಕ್ಕಡಿ (ಒಲೆ) ಇಟ್ಟು ಅಡುಗೆ ತಯಾರಿಸಿ ಅಲ್ಲಿಯೇ ಊಟ ಮಾಡುವ ಮೂಲಕ ಸರ್ಕಾರದ ನಿರ್ಲಕ್ಷ್ಯವನ್ನು ಖಂಡಿಸಿದರು.

ಬರಪೀಡಿತ ಪ್ರದೇಶಗಳ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಆರಂಭಗೊಂಡ ಯೋಜನೆ ವರ್ಷಗಳಾದರೂ ಪೂರ್ಣಗೊಳ್ಳದಿರುವುದ-ರಿಂದ ರೈತರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ನೀರಾವರಿ ಸೌಲಭ್ಯವಿಲ್ಲದೆ ಬೆಳೆ ಬೆಳೆಯಲು ಸಾಧ್ಯವಾಗುತ್ತಿಲ್ಲ. ಹಲವು ವರ್ಷಗಳಿಂದ ಭರವಸೆಗಳನ್ನಷ್ಟೇ ನೀಡಲಾಗುತ್ತಿದ್ದು, ಕಾಮಗಾರಿ ಮಾತ್ರ ಪೂರ್ಣಗೊಳ್ಳುತ್ತಿಲ್ಲ ಎಂದು ರೈತರು ಆರೋಪಿಸಿದರು.

"ಯೋಜನೆಯ ಬಾಕಿ ಕಾಮಗಾರಿಯನ್ನು ತಕ್ಷಣ ಪೂರ್ಣಗೊಳಿಸಿ ಕಾಲುವೆಗಳಿಗೆ ನೀರು ಹರಿಸಬೇಕು. ರೈತರ ಸಹನೆಯನ್ನು ಸರ್ಕಾರ ಪರೀಕ್ಷಿಸಬಾರದು. ಇನ್ನಷ್ಟು ವಿಳಂಬವಾದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು," ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು. ಪ್ರತಿಭಟನೆಯಿಂದ ವಿಜಯಪುರ ಧಾರವಾಡ ಮುಖ್ಯ ಹೆದ್ದಾರಿಯಲ್ಲಿ ಕೆಲಕಾಲ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು. ಪರಿಸ್ಥಿತಿಯನ್ನು ನಿಯಂತ್ರಿಸಲು ಪೊಲೀಸರು ಸ್ಥಳದಲ್ಲೇ ಬಿಗಿ ಬಂದೋಬಸ್ತ್ ಕೈಗೊಂಡು ವಾಹನ ಸಂಚಾರ ಸುಗಮಗೊಳಿಸಿದರು.



ರೈತರ ಹೋರಾಟಕ್ಕೆ ಜಕನೂರು ಮಠದ ಶ್ರೀ ಮಾಧುಲಿಂಗ ಮಹಾರಾಜರು ಸ್ಥಳಕ್ಕೆ ಆಗಮಿಸಿ ಬೆಂಬಲ ಸೂಚಿಸಿದರು. ರೈತರ ನ್ಯಾಯಸಮ್ಮತ ಬೇಡಿಕೆಯನ್ನು ಸರ್ಕಾರ ಕೂಡಲೇ ಈಡೇರಿಸಬೇಕು ಎಂದು ಅವರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಬಾಗಲಕೋಟೆ ಜಿಲ್ಲಾ ರೈತ ಸಂಘದ ಅಧ್ಯಕ್ಷ ಮಹಾದೇವ ನಾಯಕ್, ಜಿಲ್ಲಾ ಉಪಾಧ್ಯಕ್ಷ ರಾಮಪ್ಪ ಕರಜಗಿ, ಮಾಜಿ ಸೈನಿಕ ಶಿಖರೇಪ್ಪ ಸನ್ನಸಿದ್ದ ಸೇ-ರಿದಂತೆ ವಿವಿಧ ಗ್ರಾಮಗಳ ರೈತರು, ರೈತ ಮುಖಂಡರು, ಗ್ರಾಮಸ್ಥರು ಮತ್ತು ವ್ಯಾಪಾರಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಪ್ರತಿಭಟನೆಗೆ ಬೆಂಬಲ ಸೂಚಿಸಿದ ಚಿಕ್ಕಲಕಿ ಕ್ರಾಸ್‌ನ ವ್ಯಾಪಾರಸ್ಥರು ಸ್ವಯಂಪ್ರೇರಿತವಾಗಿ ತಮ್ಮ ಅಂಗಡಿಮುಂಗಟ್ಟುಗಳನ್ನು ಬಂದ್ ಮಾಡಿ ರೈತರೊಂದಿಗೆ ಹೋರಾಟದಲ್ಲಿ ಪಾಲ್ಗೊಂಡರು. ರೈತರ ನ್ಯಾಯಯುತ ಬೇಡಿಕೆಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಅವರು ತಿಳಿಸಿದರು.

ಚಿಕ್ಕಲಕಿ ತೊದಲಬಾಗಿಏಕಲಮಟ್ಟಿ ಏತ ನೀರಾವರಿ ಯೋಜನೆ ಶೀಘ್ರ ಪೂರ್ಣಗೊಂಡು ರೈತರ ಜಮೀನುಗಳಿಗೆ ನೀರು ಹರಿಯುವವರೆಗೆ ಹೋರಾಟ ಮುಂದುವರಿಯಲಿದೆ ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

## ಹಣದ ಆಮಿಷವೊಡ್ಡಿ ಸೂಪರ್ ಸೀಡ್ ಮಾಡಲು ಯತ್ನ । ಟಿ ವೆಂಕಟೇಶ್ ಗಂಭೀರ ಆರೋಪ

# ಟಿಎಪಿಸಿಎಂಎಸ್ ಚುನಾವಣೆಯಲ್ಲಿ ಶಾಸಕ ಅನಿಲ್ ಅಧಿಕಾರ ದುರ್ಬಳಕೆ

■ ಉದಯರಶ್ಮಿ ದಿನಪತ್ರಿಕೆ



ಎಚ್ ಡಿ ಕೋಟೆ: ತಾಲೂಕಿನಿಂದ ತಾಲೂಕಿನಗೆ ಬಂದು ಶಾಸಕ ಅನಿಲ್ ಚಿಕ್ಕಮಾದು ಹಣ ದಂದೆಯಲ್ಲಿ ನಿರತರಾಗಿದ್ದಾರೆ. ಅಧಿಕಾರ ದುರುಪಯೋಗ ಮಾಡಿಕೊಂಡು 3 ಲಕ್ಷದವರೆಗೂ ಬಡ್ಡಿ ರಹಿತ ಸಾಲ ನೀಡುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಸೂಪರ್ ಸೀಡ್ ಮಾಡುವ ಮೂಲಕ ಅವುಗಳನ್ನು ನಿಷ್ಕ್ರಿಯಗೊಳಿಸಿ , ರೈತರಿಗೆ ಮೋಸ ಮಾಡುತ್ತಿದ್ದಾರೆ. ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಅಧಿಕಾರ ದುರುಪಯೋಗ ಮಾಡಲು ನಾವು ಬಿಡುವುದಿಲ್ಲ. ಟಿಎಪಿಸಿಎಂಎಸ್ ನ 8 ಸ್ಥಾನಗಳಲ್ಲೂ ( ಬಿಜೆಪಿ –05, ಜೆಡಿಎಸ್ –03) ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಗಳು ಗೆಲುವು ಸಾಧಿಸುತ್ತಾರೆ. ನಿಮಗೆ ತಕ್ಕಪಾಠ ಕಳಿಸುತ್ತಾರೆ ಎಂದು ತಾಲೂಕು ಬಿಜೆಪಿ ಅಧ್ಯಕ್ಷ ಟಿ ವೆಂಕಟೇಶ್ ವಾಗ್ದಾಳಿ ನಡೆಸಿದರು.

ತಾಲೂಕಿನ ಗಂಗಡಹೊಸಹಳ್ಳಿಯಲ್ಲಿ ಮೈತ್ರಿ ಅಭ್ಯರ್ಥಿಗಳ ಪರ ಮತಯಾಚನೆ ಬಳಿಕ ಮಾತನಾಡಿದ ಅವರು, ಶಾಸಕ ಅನಿಲ್ ಚಿಕ್ಕಮಾದುಗೆ ಪಾಪದ ಕೊಡ ತುಂಬಿದೆ. ರೈತ–ರಿರುವ ಸೊಸೈಟಿ ಚುನಾವಣೆಗಳಲ್ಲೂ ಕೀಳು ಮಟ್ಟದ ರಾಜಕೀಯ ಮಾಡುತ್ತಿದ್ದಾರೆ. ಶಾಸಕರ ಜವಾಬ್ದಾರಿ ಮರೆತು, ವಾಮಮಾರ್ಗದಲ್ಲಿ ಅಧಿಕಾರ ಹಿಡಿಯಲು ಮುಂದಾಗಿದ್ದಾರೆ. ಟಿಎಪಿಸಿಎಂಎಸ್ ನಿರ್ದೇಶಕರ ಚುನಾವಣೆಯಲ್ಲೂ ಮತ ಚಲಾಯಿಸದಂತೆ ಮಾದಾಪುರ ಹಾಗೂ ಹೆಚ್ ಡಿ ಕೋಟೆ ಪ್ರಾಥಮಿಕ ಕೃಷಿ ಪತ್ತಿನ ಸಂಘ ಸೂಪರ್ ಸೀಡ್ ಮಾಡಲು ಹೋಗಿ ನ್ಯಾಯಾಲಯದಲ್ಲಿ ಮುಖಭಂಗ ಅನುಭವಿಸಿದ್ದಾರೆ. ಇದೀಗ ಮನುಗನಹಳ್ಳಿ, ಕ್ಯಾತನಹಳ್ಳಿ, ಚಕ್ಕೂರು ಸೊಸೈಟಿಗಳಲ್ಲೂ ಡೆಲಿಗೇಟ್ ಗಳನ್ನು ವಜಾಮಾಡಲು ಮುಂದಾಗಿದ್ದೀರಿ, ಇದು ನಿಮ್ಮ ಸ್ಥಾನಕ್ಕೆ ಶೋಭೆ ತರುವುದಿಲ್ಲ. ಎರಡು ಬಾರಿ ನೀವು ತಂದೆ ಸಾವಿನ ಅನುಕಂಪದಿಂದ ಗೆದ್ದಿದ್ದೀರಿ, ಮುಂಬರುವ ಚುನಾವಣೆಯಲ್ಲಿ ಸೋಲು ಅನುಭವಿಸುತ್ತೀರಿ. ಮತದಾರರು ನಿಮ್ಮನ್ನು ಮನೆಗೆ ಕಳಿಸುತ್ತಾರೆ, ಹೋಗಲು ರೆಡಿಯಾಗಿರಿ ಎಂದು ವೆಂಕಟೇಶ್ ಭವಿಷ್ಯ ನುಡಿದರು.

ಜೆಡಿಎಸ್ ಮುಖಂಡ ಯತೀಶ್ ಕುಮಾರ್ ಮಾತನಾಡಿ, ತಾಲೂಕಿನಲ್ಲಿ ಇದೇ ಮೊದಲ ಬಾರಿಗೆ ಬಿಜೆಪಿ–ಜೆಡಿಎಸ್ ಒಟ್ಟಾಗಿ ಟಿಎಪಿಸಿಎಂಎಸ್ ನಿರ್ದೇಶಕರ ಚುನಾವಣೆ ಎದುರಿಸುತ್ತಿದ್ದೀವಿ. ಇದನ್ನ ಸಹಿಸಲಾರದೆ ಶಾಸಕ ಅನಿಲ್ ಚಿಕ್ಕಮಾದು ಹಿಂಬಾಗಿಲಿನ ರಾಜಕಾರಣ ಮಾಡುತ್ತಿದ್ದಾರೆ. ಕ್ಯಾತನಹಳ್ಳಿ, ಮನುಗನಹಳ್ಳಿ ಸೊಸೈಟಿಗಳಲ್ಲಿ ಎನ್ ಡಿಎ ಬೆಂಬಲಿತ ಡೆಲಿಗೇಟ್ ಗಳಿಗೆ ಹಣದ ಆಮಿಷವೊಡ್ಡಿ, ಬಲವಂತವಾಗಿ ರಾಜೀನಾಮೆ ಕೊಡಿಸುವ ಮೂಲಕ ಸೂಪರ್ ಸೀಡ್ ಮಾಡಲು ಮುಂದಾಗಿದ್ದಾರೆ. ಶಾಸಕರು ನೇರವಾಗಿ ರಾಜಕೀಯ ಮಾಡೋದನ್ನು ಬಿಟ್ಟು, ಈ ರೀತಿಯ ಕೀಳುಮಟ್ಟದ ರಾಜ–ಕಾರಣ ಮಾಡುತ್ತಿರುವುದು ತಾಲೂಕಿನ ಇತಿಹಾಸದಲ್ಲೇ ಇದೆ ಮೊದಲು ಎಂದು ಆರೋಪಿಸಿದರು.

ಈ ವೇಳೆ ಜೆಡಿಎಸ್ ತಾಲೂಕು ಅಧ್ಯಕ್ಷ ರಾಜೇಂದ್ರ, ಗುಂಡತ್ತೂರು ಪ್ರಕಾಶ್, ಮೊತ್ತ ಬಸವರಾಜಪ್ಪ, ಗುರುಸ್ವಾಮಿ, ಯತೀಶ್ ಕುಮಾರ್, ಪ್ರಕಾಶ್ ಗಂಗಡ ಹೊಸಹಳ್ಳಿ, ಅರವಿಂದ, ನವೀನ್, ಪ್ರಕಾಶ್, ಕೃಷ್ಣೇಗೌಡ, ಕುನ್ನೇಗೌಡ, ನೂರ್ ಮಹಮ್ಮದ್ , ಭುಜಂಗನಾಯಕ, ಮಾದಯ್ಯ, ವೈಲಾ, ಶಿವಮಲ್ಲಪ್ಪ, ಶುಭಮಂಗಳ ಸೇ–ರಿದಂತೆ ಬಿಜೆಪಿ, ಜೆಡಿಎಸ್ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

## ಡಿಸ್ಟಿಲರಿ 650 ಕೆಎಲ್‌ಪಿಡಿ ಹಾಗೂ ವಿದ್ಯುತ್ ಉತ್ಪಾದನೆ 43.5 ಮೆಗಾವಾಟ್‌ಗೆ ಹೆಚ್ಚಳದ ಯೋಜನೆಗೆ ಸಾರ್ವಜನಿಕ ಅಭಿಪ್ರಾಯ ಸಂಗ್ರಹ

# ಶ್ರೀ ದತ್ತ ಇಂಡಿಯಾ ಕಾರ್ಖಾನೆ ಕಬ್ಬು ನುರಿಸುವ ಸಾಮರ್ಥ್ಯ 12,000 ಟಿಸಿಡಿಗೆ ವಿಸ್ತರಣೆ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ತಾಲೂಕಿನ ರೈತರ ಜೀವನಾಡಿಯಾಗಿರುವ ಶ್ರೀ ದತ್ತ ಇಂಡಿಂ–ಯಾ ಪ್ರೈವೇಟ್ ಲಿಮಿಟೆಡ್, ಹಾವಿನಾಳ ಸಕ್ಕರೆ ಕಾರ್ಖಾನೆಯ ಕಬ್ಬು ನುರಿಸುವ ಸಾಮಥ–ರ್ಯ ವಿಸ್ತರಣೆ ಹಾಗೂ ಇತರೆ ಅಭಿವೃದ್ಧಿ ಯೋಜನೆಗಳ ಕುರಿತು ಸಾರ್ವಜನಿಕ ಸಭೆಯು ಬುಧವಾರ ಕಾರ್ಖಾನೆಯ ಆವರಣದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ಔದ್ರಮ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಡಾ. ಔದ್ರಾಮ ಅವರು ಕಾರ್ಖಾನೆಯ ಕಬ್ಬು ನುರಿಸುವ ಸಾಮರ್ಥ್ಯ ಹೆಚ್ಚಿಸುವದ–ರಿಂದ ರೈತರು ಹಾಗೂ ಸುತ್ತಮುತ್ತಲಿನ ಗ್ರಾಮದ ಸಾರ್ವಜನಿಕರ ಮೇಲೆ ಆಗುವ ಪರಿಣಾಮಗಳ ಕುರಿತು ಹಾಗೂ ಕಾರ್ಖಾನೆಯ ತ್ಯಾಜ್ಯಗಳಿಂದ ಪರಿಸರ ಹಾಳಾಗದಂತೆ ವೈಜ್ಞಾನಿಕವಾಗಿ ಕೈಗೊಂಡ ಕ್ರಮಗಳ ಕುರಿತು ಸವಿಸ್ತಾರ ಮಾಹಿತಿ ಕಲೆಹಾಕಿದ ಅವರು ರೈತರಿಂದ, ಸಾರ್ವಜನಿಕರಿಂದ ಹಾಗೂ ಪರಿಸರ ವಾದಿಗಳಿಂದ ಆಕ್ಷೇಪಣೆ ಇದ್ದರೆ ನಿಖರ ಪುರಾವೆಗಳೊಂದಿಗೆ ಮಾಹಿತಿ ತಿಳಿಸುವಂತೆ ಹೇಳಿದರು.

ಸಭೆಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಿಜಯಪುರದ ಪರಿಸರ ಅಧಿಕಾರಿ ಎಸ್. ರಮೇಶ್ ಮಾತನಾಡಿ, ಪ್ರಸ್ತುತ ದಿನಕ್ಕೆ 2,500 ಟಿಸಿಡಿ (ಟನ್ ಕಬ್ಬು ನುರಿಸುವ ಸಾಮಥ–ರ್ಯ) ಹೊಂದಿರುವ ಕಾರ್ಖಾನೆಯನ್ನು 12,000 ಟಿಸಿಡಿಗೆ ವಿಸ್ತರಿಸುವ ಪ್ರಸ್ತಾವನೆಯ ಜೋತೆಗೆ 19.5 ಮೆಗಾವಾಟ್‌ನಿಂದ 43.5 ಮೆಗಾವಾಟ್‌ಗೆ ಸಹ–ವಿದ್ಯುತ್ ಉತ್ಪಾದನಾ ಘಟಕದ ಸಾಮರ್ಥ್ಯ ಹೆಚ್ಚಳ ಹಾಗೂ ಈ ಡಿಸ್ಟಿಲರಿ ಘಟಕದಲ್ಲಿ ಕಬ್ಬಿನ ರಸ, ಮೊಲಾಸಸ್ ಹಾಗೂ ವಿವಿಧ ಧಾನ್ಯಗಳನ್ನು ಕಚ್ಚಾ ವಸ್ತುವಾಗಿ ಬಳಸುವದರೊಂದಿಗೆ 60 ಕೆಎಲ್‌ಪಿಡಿಯಿಂದ 650 ಕೆಎಲ್‌ಪಿಡಿಗೆ ಡಿಸ್ಟಿಲರಿ ಘಟಕದ ವಿಸ್ತರಣೆ ಕೈಗೊಳ್ಳಲು ಶ್ರೀ ದತ್ತ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಹಾವಿನಾಳ ಸಕ್ಕರೆ ಕಾರ್ಖಾನೆಯವರಿಂದ ಪ್ರಸ್ತಾವನೆ ಸಲ್ಲಿಸಿದ್ದು ಅದರ ಪರಿಶೀಲನೆ ಮಾಡಲಿಕ್ಕೆ ಬಂದಿರುವುದಾಗಿ ಹೇಳಿದರು.

ಕಾರ್ಯಕ್ರಮವನ್ನು ಕಾರ್ಖಾನೆಯ ಸಂಚಾಲಕರಾದ ಪ್ರೀತಿ ರೂಪಾರೆಲ್ ಹಾಗೂ ಜಿತೇಂದ್ರ ಧಾರು ಅವರ ಮಾರ್ಗದರ್ಶನದಲ್ಲಿ, ಕಂಪನಿಯ ಉಪಾಧ್ಯಕ್ಷ ಮೃತ್ಯುಂಜಯ ಶಿಂಧೆ ಅವರ ನಿರ್ದೇಶನದಂತೆ ಆಯೋಜಿಸಲಾಗಿತ್ತು. ಕಾರ್ಖಾನೆಯ ಆಡಳಿತಾಧಿಕಾರಿ ರವೀಂದ್ರ ಗಾಯಕವಾಡ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಸಭೆಯಲ್ಲಿ ಹಾವಿನಾಳ, ಕಂಚನಾಳ, ಹಾಲಹಳ್ಳಿ, ನಿವರಗಿ, ಗೋಡಿಹಾಳ ಸೇರಿದಂತೆ ಕಾರ್ಖಾನೆಯ ಕಾರ್ಯಕ್ಷೇತ್ರದ ವಿವಿಧ ಗ್ರಾಮಗಳ ರೈತರು ಮತ್ತು ಗ್ರಾಮಸ್ಥರು ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಹಿರಿಯ ಪರಿಸರ ಅಧಿಕಾರಿ ಗೋಪಾಲಕೃಷ್ಣ ಸಣ್ಣತಂಗಿ (ವಲಯ ಕಚೇರಿ, ಬೆಳಗಾವಿ), ವಿಜಯಪುರ ಆಹಾರ ಇಲಾಖೆಯ ಉಪನಿರ್ದೇಶಕ ವಿನಯ ಪಾಟೀಲ, ಚಡಚಣ ಪೊಲೀಸ್ ಠಾಣೆಯ ಪಿಎಸ್‌ಐ ಅಪನಾಯಕ, ಹತ್ತಳ್ಳಿ ಗ್ರಾಮ ಪಂಚಾಯಿತಿ ಪಿಡಿಓ ಶಿವರಾಯ ಬಿರಾದಾರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಕಾರ್ಖಾನೆ ಸಿಬ್ಬಂದಿ, ಕಬ್ಬು ಬೆಳೆಗಾರ ರೈತರು ಇದ್ದರು.



# ವಿಜಯಪುರ ಜಿಲ್ಲಾ ಸ್ಕೌಟ್ಸ್ & ಗೈಡ್ಸ್ ಸಂಸ್ಥೆಗೆ ರಾಜ್ಯ ಪದಾಧಿಕಾರಿಗಳ ಭೇಟಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ರಾಜ್ಯ ಸಂಸ್ಥೆಯ ಉಪಾಧ್ಯಕ್ಷ ಗಜಾನನ ಮನ್ನಿಕೇರಿ, ರಾಜ್ಯ ಕಾಯ9ಕಾರಿ ಸಮಿತಿ ಸದಸ್ಯ ಸಿ ಎ ಸಾವಳಗಿ, ರಾಜ್ಯ ಸಂಘಟನಾ ಆಯುಕ್ತೆ(ಗೈಡ್) ಮಂಜುಳಾ ಸಿ ರವರು ಗುರುವಾರ ಭೇಟಿ ನೀಡಿದರು.

ಈ ವೇಳೆ ವಿಜಯಪುರ ಗ್ರಾಮೀಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ತಳವಾರ ಮತ್ತು ನಗರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ರಾಘವೇಂದ್ರ ಹೊಸೂರ ರವರನ್ನು ಭೇಟಿಮಾಡಿ ಸ್ಕೌಟ್ ಮತ್ತು ಗೈಡ್ ಚಟುವಟಿ–ಕೆಗಳಿಗೆ ಸಹಕರಿಸಲು, ಪ್ರಾರಂಭಿಕ ತರಬೇತಿ ಆಯೋಜನೆ ಹಾಗೂ ಮೂಲ ತರಬೇತಿ ಸಂಘಟನೆಗೆ ಸಂಪೂರ್ಣವಾಗಿ ಸಹಕರಿಸಲು ತಿಳಿಸಿದರು.

ನಂತರ ಲೊಯೋಲ ಆಂಗ್ಲ ಮಾಧ್ಯಮ ಶಾಲೆಯ ಪ್ರಾಚಾರ್ಯರನ್ನು ಭೇಟಿ ಮಾಡಿ ಬನ್ನಿ ಮತ್ತು ಕಬ್ ಬುಲ್ ಬುಲ್ ದಳಗಳನ್ನು ಪ್ರಾರಂಭಿಸುವಂತೆ ವಿನಂತಿಸಿದರು.

ಮಧ್ಯಾಹ್ನ ಸ್ಕೌಟ್ ಭವನದಲ್ಲಿ ನಡೆದ ಜಿಲ್ಲಾ ಪದಾಧಿಕಾರಿಗಳ ಸಭೆಯು ಜಿಲ್ಲಾ ಮುಖ್ಯ ಆಯುಕ್ತ ಸಿದ್ದಣ್ಣ ಸಕ್ರಿ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಜಿಲ್ಲಾ ಸಂಸ್ಥೆಯ ಅಭಿವೃದ್ಧಿಯ ಕುರಿತು ಚಚಿ9ಸಲಾಯಿತು. ಸದರಿ ಸಭೆಯಲ್ಲಿ ಮಾನ್ಯ ಉಪನಿರ್ದೇಶಕರು(ಆಡಳಿತ) ಶಾಲಾ ಶಿಕ್ಷಣ ಇಲಾಖೆ ವಿಜಯಪುರ ಎಂ ಎ ಗುಳೇದಗುಡ್ಡ ರವರು ಉಪಸ್ಥಿತರಿದ್ದು ಇಲಾಖೆಯಿಂದ ಸಂಪೂರ್ಣ ಸಹಕಾರ ನೀಡುತ್ತೇವೆಂದು ಹೇಳಿದರು. ಸಭೆಯ ನಂತರ ಶ್ರೀಮತಿ ಬಂಗಾರಮ್ಮ ಸಜ್ಜನ ಮಹಿಳಾ ಪದವಿ ಕಾಲೇಜಿನ ಪ್ರಾಂಶುಪಾಲ ವೈ ತಮ್ಮಣ್ಣ ರವರೊಂದಿಗೆ ಪ್ರೇರಣಾ ಕಾಯ9ಕ್ರಮದ ಕುರಿತು ಚಚಿ9ಸಲಾಯಿತು. ಡಾ. ಫ ಗು ಹಳಕಟ್ಟಿಯವರು ಪ್ರಥಮವಾಗಿ ಸ್ಕೌಟ್ ದಳ ಪ್ರಾರಂಭಿಸಿದ ಎಸ್ ಎಸ್ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರನ್ನು ಕಂಡು ಸ್ಕೌಟ್ ದಳದ ಪ್ರಗತಿ ಕುರಿತು ಚಚಿ9ಸಲಾಯಿತು.

ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪನಿರ್ದೇಶಕರಾದ ಕೆ ಎ ಉಪ್ಪಾರ ರವರನ್ನು ಭೇಟಿಯಾಗಿ ಪದವಿಪೂರ್ವ ಕಾಲೇಜುಗಳಲ್ಲಿ ರೋವರ್, ರೇಂಜರ್ ಘಟಕಗಳನ್ನು ಹೆಚ್ಚಿಸಲು ಸಹಕರಿಸುವಂತೆ ಗಜಾನನ ಮನ್ನಿಕೇರಿ ವಿನಂತಿಸಿದರು.

ಕಾಯ9ಕ್ರಮದಲ್ಲಿ ಜಿಲ್ಲಾ ಉಪಾಧ್ಯಕ್ಷ ಪೂಜಪ್ಪ ಪೂಜಾರಿ, ಜಿಲ್ಲಾ ತರಬೇತಿ ಆಯುಕ್ತ (ಗೈಡ್) ಶ್ರೀಮತಿ ಪಿ ಎಂ ಪೂಜಾರಿ, ಜಂಟಿ ಕಾಯ9ದಶಿ9 ಶ್ರೀಮತಿ ಡಿ ಎಲ್ ಪಿಜಾರ, ಜಿಲ್ಲಾ ಕೇಂದ್ರ ಸ್ಥಾನಿಕ ಆಯುಕ್ತ ಶರಣು ಸಬರದ, ಜಗದೀಶ ಬೋಳಸೂರ, ಜಿಲ್ಲಾ ಕಾಯ9ದಶಿ9ಗಳಾದ ಪಿ ಎಸ್ ಕುಂಬಾರ, ಆರ್ ಆರ್ ಅಲಕುಂಟೆ ಉಪಸ್ಥಿತರಿದ್ದರು.

# ಜು..26 ರಂದು ಕಾರ್ಗಿಲ್ ವಿಜಯೋತ್ಸವ ಅರ್ಥಪೂರ್ಣ ಆಚರಣೆಗೆ ನಿರ್ಧಾರ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಇದೇ ದಿ.26 ರಂದು ಕಾರ್ಗಿಲ್ ವಿಜಯೋತ್ಸವವನ್ನು ಅರ್ಥಪೂರ್ಣ ಹಾಗೂ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಎಂದು ಜಿಲ್ಲಾ ಮಾಜಿ ಸೈನಿಕರ ಕಲ್ಯಾಣ ಸಂಘದ ಅಧ್ಯಕ್ಷ ಎಲ್.ಕೆ. ರಾಮಪ್ಪ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಗಿಲ್ ಯುದ್ಧದಲ್ಲಿ ಭಾಗಿಯಾಗಿದ್ದ ಸೈನಿಕರನ್ನು ಆಹ್ವಾನಿಸಲಾಗಿದ್ದು, ಅವರ ಅನುಭವ ಹಾಗು ವಿಚಾರಗಳನ್ನು ಹಂಚಿಕೊಳ್ಳಲಿದ್ದಾರೆ. ಕಾರ್ಗಿಲ್ ಯುದ್ಧದ ಕಷ್ಟದ ಸನ್ನಿವೇಶಗಳು, ನಮ್ಮ ವೀರಯೋಧರ ಸಾಹಸದ ಗಾಥ–'ಯನ್ನು ವಿವರಿಸುವ ನಿಟ್ಟಿನಲ್ಲಿ ವಿಶೇಷ ವಿಡಿಯೋಗಳ ಪ್ರದರ್ಶನ ಹಾಗೂ ಮಾಜಿ ಸೈನಿಕರಿಗೆ ಗೌರವಾರ್ಪಣೆ ಸೇರಿದಂತೆ ವಿವಿಧ ಅರ್ಥಪೂರ್ಣ ಕಾರ್ಯಕ್ರಮಗಳು ಜರುಗಲಿವೆ.

ಬೆಳಿಗ್ಗೆ 7 ಕ್ಕೆ ಸೈನಿಕ ಶಾಲೆಯಲ್ಲಿರುವ ಹುತಾತ್ಮಸ್ತಂಭದಲ್ಲಿ ಬೆಳಿಗ್ಗೆ 7 ಕ್ಕೆ ಗೌರವಾರ್ಪಣೆ ನಡೆಯಲಿದೆ. ಅಲ್ಲಿಂದ ಶಾಂತಿಯುತ ಮೆರವಣಿಗೆ ಆರಂಭವಾಗಲಿದ್ದು, ಸೈನಿಕ ಶಾಲೆಯ ಕೆಡೆಟ್‌ಗಳು, ಎನ್‌ಸಿಸಿ ಕೆಡೆಟ್‌ಗಳು ಈ ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ.

ನಂತರ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ. ಪಾಟೀಲ, ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ, ಎಕ್ಸಲೆಂಟ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಬಸವರಾಜ ಕೌಲಗಿ, ವೇದ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಶಿವಾನಂದ ಕೆಲೂರ, ಡಾ.ಬಾಬು ರಾಜೇಂದ್ರನಾಯಕ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದು ವಿವ–ರಿಸಿದರು. ಕಾರ್ಗಿಲ್ ಯುದ್ಧದಲ್ಲಿ ಅನೇಕ ವೀರಯೋಧರು ತಮ್ಮ ಪ್ರಾಣವನ್ನು ಅರ್ಪಿಸಿದ್ದಾರೆ, ಅನೇಕ ಸೈನಿಕರನ್ನು ನಾವು ಕಳೆದುಕೊಂಡಿದ್ದೇವೆ, ಈ ದು:ಖ ಅವ–ರಿಗೆ ಹಾಗೂ ಅವರ ಕುಟುಂಬದಲ್ಲಿ ಸದಾ ಇದ್ದರೂ ಸಹ ದೇಶಕ್ಕೆ ಆಗಿರುವ ವಿಜಯದ ಹಿನ್ನೆಲೆಯಲ್ಲಿ ಎಲ್ಲರೂ ವಿಜಯೋತ್ಸವವನ್ನು ಸಂಭ್ರಮದಿಂದ ಆಚರಣೆ ಮಾಡಿಕೊಂಡು ಬರಲಾಗುತ್ತಿದೆ, 527 ಸೈನಿಕರು ವೀರ ಮರಣವನ್ನಪ್ಪಿದ್ದರೆ, ಸಾವಿರಾರು ಸೈನಿಕರು ಗಂಭೀರವಾಗಿ ಗಾಯಗೊಂಡರು, ದೇಶದ ಸುಭದ್ರತೆಗೆ ಈ ಯೋಧರ ತ್ಯಾಗ, ಬಲಿದಾನಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ ಎಂದರು.

ಕಷ್ಟದ ಸಂಕೋಲೆಯನ್ನು ಎದುರಿಸಿ ಎದುರಾಳಿಗಳನ್ನು ಎದುರಿಸಿ ಕಾರ್ಗಿಲ್ ವಶಪಡಿಸಿಕೊಳ್ಳುವಲ್ಲಿ ಸೈನಿಕ ಬಂಧುಗಳ ಪಾತ್ರ ಪ್ರಮುಖವಾಗಿದೆ, ಹೀಗಾಗಿ ಅವರನ್ನು ನಿತ್ಯ ನೆನೆಯಬೇಕಿದೆ ಎಂದರು. ಕೇವಲ ಮದ್ದು–ಗುಂಡುಗಳಿಂದ ಈ ಯುದ್ಧವನ್ನು ನಾವು ಗೆಲ್ಲಲಿಲ್ಲ, ನಮ್ಮ ವೀರ ಸೈನಿಕರ ಅದಮ್ಯ ದೇಶಾಭಿಮಾನ, ಧೈರ್ಯದ ಪರಿಣಾಮ ಯುದ್ಧದಲ್ಲಿ ನಾವು ಗೆಲ್ಲುವಂತಾಯಿತು ಎಂದರು.

ಸೈನಿಕರ ಜೊತೆ ಸೈನಿಕರ ಕುಟುಂಬವನ್ನು ನಾವು ಸ್ಮರಿಸಬೇಕಿದೆ, ಅವರ ತ್ಯಾಗವೂ ಸಹ ಅನನ್ಯ, ತಮ್ಮ ಕುಟುಂಬದ ಕುಡಿಯನ್ನೇ ದೇಶ ಸೇವೆಗಾಗಿ ಅರ್ಪಣೆ ಮಾಡುವ ನಿಸ್ವಾರ್ಥ ಕುಟುಂಬಗಳಿಗೆ ನಾವು ವಿಧೇಯರಾಗಬೇಕಿದೆ ಎಂದರು. ಯಾರೂ ಯಾವ ವೃತ್ತಿಯೇ ಮಾಡಲಿ, ದೇಶಾಭಿಮಾನವನ್ನು ಉಸಿರಾಗಿಸಿಕೊಳ್ಳಿ, ಈ ಅಭಿಮಾನವಿದ್ದರೆ ಯಾವ ಅಪಾಯವೂ ಇಲ್ಲ, ಅಪಾಯ ಬಂದರೂ ಸಹ ಅದನ್ನು ಧೈರ್ಯವಾಗಿ ಎದುರಿಸಬೇಕು ಎಂದರು.

ಪ್ರಧಾನ ಕಾರ್ಯದರ್ಶಿ ವಿದ್ಯಾಧರ ಪಾಟೀಲ, ದೇಶಾಭಿಮಾನ ವೃದ್ಧಿಸುವ ದೃಷ್ಟಿಯಿಂದ ನಡೆಯಲಿರುವ ಪಥ ಸಂಚಲನದಲ್ಲಿ ಮಾಜಿ ಸೈನಿಕರು, ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ, ಸೈನಿಕರ ಶೌರ್ಯ ಪ್ರದರ್ಶಿಸುವ ವಿಶೇಷ ಕಿರುಚಿತ್ರ ಪ್ರದರ್ಶನ ಕಂದಗಲ್ ಶ್ರೀ ಹನುಮಮಂತರಾಯ ರಂಗಮಂದಿರದಲ್ಲಿ ನಡೆಯಲಿದೆ ಎಂದು ವಿವರಿಸಿದರು.

ಕಲ್ಯಾಣ ಸಂಘದ ಗೌರವಾಧ್ಯಕ್ಷ ಎಚ್. ಆರ್. ಮಾಚಪ್ಪನವರ, ಉಪಾಧ್ಯಕ್ಷ ಕ್ಯಾಪ್ಟನ್ ಕಾಶಿಲಿಂಗ ಶೇಗಾಂವಿ, ಕ್ಯಾ.ಸಿದ್ಧರಾಮ ಶೇಗುಣಸಿ, ಜೈನುದ್ದೀನ್ ಗುಂಡಬಾವಡಿ, ಕೋಶಾಧ್ಯಕ್ಷ ಶಂಕರ ಮೇಟಿ, ಚಂದ್ರಾಮ ಪೂಜಾರಿ, ರಾಮಪ್ಪ ಉಳ್ಳಾಗಡ್ಡಿ ಮೊದಲಾದವರು ಉಪಸ್ಥಿತರಿದ್ದರು.

# 'ನಮ್ಮ ಕಥಾ ಅರಮನೆ' ಕನ್ನಡದ ಅಕ್ಷರೋತ್ಸವಕ್ಕೆ 8ನೇ ವಾರ್ಷಿಕೋತ್ಸವ ಸಂಭ್ರಮ

■ ಉದಯರಶ್ಮಿ ದಿನಪತ್ರಿಕೆ

ಒಂದು ಕನಸು, ಒಂದು ಉದ್ದೇಶ ಮತ್ತು ಕನ್ನಡ ಸಾಹಿತ್ಯದ ಮೇಲಿನ ಅಪಾರ ಪ್ರೀತಿಯಿಂದ ಆರಂಭವಾದ "ನಮ್ಮ ಕಥಾ ಅರಮನೆ" ಇಂದು 39 ಸಾವಿರಕ್ಕೂ ಹೆಚ್ಚು ಸದಸ್ಯರನ್ನು ಹೊಂದಿರುವ ಫೇಸ್‌ಬುಕ್ ಮೂಲದ ಕನ್ನಡದ ಪ್ರಮುಖ ಸಾಹಿತ್ಯ ವೇದಿಕೆಯಾಗಿ ಬೆಳೆದಿದೆ. ಜುಲೈ 25 ಕ್ಕೆ ತನ್ನ 8ನೇ ವಾರ್ಷಿಕೋತ್ಸವವನ್ನು ಆಚ–'ರಿಸುತ್ತಿರುವ ಈ ವೇದಿಕೆ ಸಾವಿರಾರು ಬರಹಗಾರರ ಪ್ರತಿಭೆಗೆ ಬೆಳಕು ನೀಡಿದ ಅಕ್ಷರದ ಅರಮನೆಯಾಗಿದೆ.

ಈ ಯಶಸ್ಸಿನ ಹಿಂದೆ ಸಂಸ್ಥಾಪಕರ ದೂರದೃಷ್ಟಿ, ಸಂಚಾಲಕರ ನಿಸ್ವಾರ್ಥ ಯೋಜನೆ, ನಿರ್ವಾಹಕರ ನಿರಂತರ ಸೇವೆ ಮತ್ತು ಲಕ್ಷಾಂತರ ಸಾಹಿತ್ಯ ಬರಹಗಳು, ಕೃತಿಗಳನ್ನು ರಚಿಸಿ ಹಂಚಿಕೊಂಡ ಸಾವಿರಾರು ಸದಸ್ಯರ ಸೃಜನಶೀಲತೆ ಅಡಗಿದೆ. ಕಥೆ, ಕವನ, ಲೇಖನ, ಚಿತ್ರಕವನ, ಸಾಹಿತ್ಯ ಸ್ಪರ್ಧೆಗಳು, ವಿಶೇಷ ಥೀಮ್‌ಗಳು ಹಾಗೂ ನಿರಂತರ ಸಾಹಿತ್ಯ ಚಟುವಟಿಕೆಗಳ ಮೂಲಕ ಈ ವೇದಿಕೆ ಕನ್ನಡದ ಓದು ಮತ್ತು ಬರವಣಿಗೆಯ ಸಂಸ್ಕೃತಿಯನ್ನು ಮತ್ತಷ್ಟು ಶ್ರೀಮಂತಗೊಳಿಸಿದೆ.

ಹೊಸ ಬರಹಗಾರರಿಗೆ ಅವಕಾಶ, ಪ್ರತಿಭೆಗೆ ಪ್ರೋತ್ಸಾಹ, ಅನುಭವಿ ಲೇಖಕ–ರಿಂದ ಮಾರ್ಗದರ್ಶನ ಮತ್ತು ಪರಸ್ಪರ ಕಲಿಕೆಯ ವಾತಾವರಣವನ್ನು ನಿರ್ಮಿಸಿರುವ "ನಮ್ಮ ಕಥಾ ಅರಮನೆ" ಕೇವಲ ಒಂದು ಫೇಸ್‌ಬುಕ್ ಗುಂಪಲ್ಲ, ಅದು ಸಾವಿರಾರು ಕನ್ನಡ ಮನಸ್ಸುಗಳನ್ನು ಬೆಸೆಯುವ ಜೀವಂತ ಸಾಹಿತ್ಯ ಕುಟುಂಬವಾಗಿದೆ.

ಎಂಟು ವರ್ಷಗಳ ಈ ಪಯಣವು ಕನ್ನಡದ ಮೇಲಿನ ಪ್ರೀತಿ, ಸಮರ್ಪಣೆ ಮತ್ತು ಸಾಮೂಹಿಕ ಪರಿಶ್ರಮದ ಸಂಕೇತವಾಗಿದೆ. ಕನ್ನಡ ಸಾಹಿತ್ಯದ ಬೆಳವಣಿಗೆಗೆ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡುತ್ತಿರುವ "ನಮ್ಮ ಕಥಾ ಅರಮನೆ" ಇನ್ನಷ್ಟು ಎತ್ತರಗಳನ್ನು ತಲುಪಿ, ಹೊಸ ತಲೆಮಾರಿನ ಬರಹಗಾರ–ರಿಗೆ ಸ್ಫೂರ್ತಿಯ ಕೇಂದ್ರವಾಗಲಿ ಎಂಬುದು ಎಲ್ಲರ ಹಾರೈಕೆ.ಸಂಸ್ಥಾಪಕರು: ಶ್ರೀ ಗುಡ್ಡಾ ಭಟ್ಟ ಜೋಷಿ ಹೊಳಲು

39 ಸಾವಿರ ಬರಹಗಾರರನ್ನು ಬೆಸೆದ ಕನಸಿನ ರೂವಾರಿ ಶ್ರೀ ಗುಡ್ಡಾ ಭಟ್ಟ ಜೋಷಿ ಹೊಳಲು ರವರು.

ಸಾಮಾಜಿಕ ಜಾಲತಾಣಗಳು ಕೇವಲ ಮನರಂಜನೆಗೆ ಸೀಮಿತವಾಗದೆ, ಸಾಹಿತ್ಯದ ಬೆಳವಣಿಗೆಗೂ ಪರಿಣಾಮಕಾರಿ ವೇದಿಕೆಯಾಗಬಹುದು ಎಂಬುದನ್ನು ತೋರಿಸಿದವರು ಶ್ರೀ ಗುಡ್ಡಾ ಭಟ್ಟ ಜೋಷಿ ಹೊಳಲು. ಅವರ ದೂರದೃಷ್ಟಿ ಮತ್ತು ಕನ್ನಡದ ಮೇಲಿನ ಅಪಾರ ಪ್ರೀತಿಯಿಂದ 2018 ಜುಲೈ 25 ರಂದು ಹುಟ್ಟಿಕೊಂಡ "ನಮ್ಮ ಕಥಾ ಅರಮನೆ" ಇಂದು ಫೇಸ್‌ಬುಕ್ ಆಧಾರಿತ ಕನ್ನಡ ಬರಹಗಾರರ ಅತಿದೊಡ್ಡ ವೇದಿಕೆಗಳಲ್ಲಿ ಒಂದಾಗಿ ಸುಮಾರು 39 ಸಾವಿರ ಸದಸ್ಯರನ್ನು ಒಗ್ಗೂಡಿಸಿದೆ.

ಹೊಸ ಬರಹಗಾರರಿಗೆ ಅವಕಾಶ, ಅನುಭವಿ ಸಾಹಿತಿಗಳ ಮಾರ್ಗದರ್ಶನ, ಓದು ಮತ್ತು ಬರವಣಿಗೆಯ ಸಂಸ್ಕೃತಿಯ ವಿಸ್ತರಣೆ ಹಾಗೂ ಕನ್ನಡ ಸಾಹಿತ್ಯದ ಮೇಲೆ ಯುವಜನರಲ್ಲಿ ಆಸಕ್ತಿ ಮೂಡಿಸುವುದು ಈ ವೇದಿಕೆಯ ಮೂಲ ಉದ್ದೇಶವಾಗಿದೆ. ಸಾವಿರಾರು ಕಥೆಗಳು, ಕವಿತೆಗಳು, ಲೇಖನಗಳು ಹಾಗೂ ಸಾಹಿತ್ಯ ಚಟುವಟಿ–ಕೆಗಳ ಮೂಲಕ ಅನೇಕ ಪ್ರತಿಭೆಗಳು ಸಮಾಜದ ಮುಂದೆ ಪರಿಚಯವಾಗಿವೆ.

ಒಬ್ಬ ವ್ಯಕ್ತಿಯ ಉತ್ತಮ ಚಿಂತನೆ ಸಾವಿರಾರು ಮನಸ್ಸುಗಳನ್ನು ಜೋಡಿಸಬಲ್ಲದು ಎಂಬುದಕ್ಕೆ "ನಮ್ಮ ಕಥಾ ಅರಮನೆ"ಯ ಯಶಸ್ಸು ಅತ್ಯುತ್ತಮ ಉದಾಹರಣೆ. ಶ್ರೀ ಗುಡ್ಡಾ ಭಟ್ಟ ಜೋಷಿ ಹೊಳಲು ಅವರ ಈ ಸಾಹಿತ್ಯಯಜ್ಞ ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಮತ್ತಷ್ಟು ಶ್ರೀಮಂತಗೊಳಿಸುತ್ತಿದ್ದು, ಮುಂದಿನ ಪೀಳಿಗೆಗೂ ಪ್ರೇರಣೆಯ ದಾ–ರಿದೀಪವಾಗಿದೆ.

"ನಮ್ಮ ಕಥಾ ಅರಮನೆ" ಲೋಗೋ

ನಿರ್ವಾಹಕಿಯರು: ಸಾಹಿತ್ಯ ಸೇವೆಯ ಹಿಂದೆ ನಿಂತಿರುವ ಹನ್ನೆರಡು ಕೈಗಳು

ಸುಮಾರು 39 ಸಾವಿರ ಸದಸ್ಯರನ್ನು ಹೊಂದಿರುವ "ನಮ್ಮ ಕಥಾ ಅರಮನೆ" ಇಂದು ಕನ್ನಡ ಸಾಹಿತ್ಯದ ಜೀವಂತ ವೇದಿಕೆಯಾಗಿ ಬೆಳೆದಿದ್ದರೆ, ಅದರ ಹಿಂದೆ ಅನೇಕ ನಿಸ್ವಾರ್ಥ ಮನಸ್ಸುಗಳ ನಿರಂತರ ಪರಿಶ್ರಮ ಅಡಗಿದೆ. ಅದರಲ್ಲೂ ವೇದಿಕೆಯ ಇಂದಿನ 12 ಮಂದಿ ನಿರ್ವಾಹಕಿಯರ ಸೇವೆ ವಿಶೇಷವಾಗಿ ಸ್ಮರಣೀಯ.

ಪ್ರತಿ ವಾರ ಹೊಸ ಥೀಮ್‌ಗಳನ್ನು ರೂಪಿಸುವುದು, ನೂರಾರು ಬರಹಗಳನ್ನು ಓದಿ ಮೌಲ್ಯಮಾಪನಕ್ಕೆ ಸಜ್ಜುಗೊಳಿಸುವುದು, ಫಲಿತಾಂಶಗಳನ್ನು ಪ್ರಕಟಿಸುವುದು, ವಿಜೇತ–ರಿಗೆ ಅಭಿನಂದನೆ ಸಲ್ಲಿಸುವುದು, ಆಕರ್ಷಕ ಅಭಿನಂದನಾ ಪತ್ರಗಳನ್ನು ಸಿದ್ಧಪಡಿಸುವುದು, ಸದಸ್ಯರನ್ನು ಪ್ರೋತ್ಸಾಹಿಸುವುದು ಹಾಗೂ ವೇದಿಕೆಯ ಸಾಹಿತ್ಯದ ಗುಣಮಟ್ಟವನ್ನು ಕಾಪಾಡುವುದು ಇವೆಲ್ಲವೂ ಸುಲಭದ ಕೆಲಸಗಳಲ್ಲ. ಇವೆಲ್ಲವನ್ನೂ ಅವರು ಯಾವುದೇ ಪ್ರತಿಫಲದ ನಿರೀಕ್ಷೆಯಿಲ್ಲದೆ, ಕನ್ನಡ ಸಾಹಿತ್ಯದ ಮೇಲಿನ ಪ್ರೀತಿಯಿಂದ ನಿರ್ವಹಿಸುತ್ತಿದ್ದಾರೆ. ಸಾಹಿತ್ಯದ ಬೆಳವಣಿಗೆಗೆ ಬರಹಗಾರರು ಎಷ್ಟು ಮುಖ್ಯವೋ, ಅಂತಹ ಬರಹಗಾರರನ್ನು ಬೆಳೆಸುವ ವೇದಿಕೆಯನ್ನು ಶಿಸ್ತುಬದ್ಧವಾಗಿಮುನ್ನಡೆಸುವನಿರ್ವಾಹಕರೂ ಅಷ್ಟೇ ಮುಖ್ಯ. ತಮ್ಮ ಸಮಯ, ಶ್ರಮ ಮತ್ತು ಪ್ರತಿಭೆಯನ್ನು ಸಮರ್ಪಿಸಿ ಸಾವಿರಾರು ಸದಸ್ಯರಲ್ಲಿ ಬರವಣಿಗೆಯ ಉತ್ಸಾಹವನ್ನು ಜೀವಂತವಾಗಿಟ್ಟಿರುವ ಈ ಹನ್ನೆರಡು ನಿರ್ವಾಹಕಿಯರು ನಿಜಕ್ಕೂ ಈ ಸಾಹಿತ್ಯ ಕುಟುಂಬದ ಆಧಾರಸ್ತಂಭಗಳು.

**"ನಮ್ಮ ಕಥಾ ಅರಮನೆ" ಕೇವಲ ಒಂದು ಫೇಸ್‌ಬುಕ್ ಗುಂಪಲ್ಲ, ಸಾವಿರಾರು ಕನ್ನಡ ಮನಸ್ಸುಗಳನ್ನು ಬೆಸೆಯುವ ಜೀವಂತ ಸಾಹಿತ್ಯ ಕುಟುಂಬ**

ಅವರ ಈ ಮೌನ ಸೇವೆ, ಸಮರ್ಪಣೆ ಮತ್ತು ಸಾಹಿತ್ಯಾಭಿಮಾನಕ್ಕೆ ಕನ್ನಡದ ಪ್ರತಿಯೊಬ್ಬ ಸಾಹಿತ್ಯಾಸಕ್ತನ ಗೌರವ ಮತ್ತು ಕೃತಜ್ಞತೆ ಸಲ್ಲುತ್ತದೆ. ಇವರ ಪರಿಶ್ರಮದಿಂದಲೇ "ನಮ್ಮ ಕಥಾ ಅರಮನೆ" ಇಂದು ಸಾವಿರಾರು ಕನ್ನಡ ಮನಸ್ಸುಗಳನ್ನು ಒಂದೇ ಸೂರಿನಡಿ ಬೆಸೆಯುವ ಅಪರೂಪದ ಸಾಹಿತ್ಯ ವೇದಿಕೆಯಾಗಿ ಅರಳಿದೆ.



ಸಂಸ್ಥಾಪಕರು "ನಮ್ಮ ಕಥಾ ಅರಮನೆ"

ನಮ್ಮ ಕಥಾ ಅರಮನೆಯ ನಿಜವಾದ ಸಂಪತ್ತು ಅದರ ಸದಸ್ಯರು ಕಲಮನ್ನು ಕೈಬಿಡದೆ ನಿರಂತರವಾಗಿ ಬರೆಯುತ್ತ, ಓದುತ್ತ, ಪರಸ್ಪರ ಪ್ರೋತ್ಸಾಹಿಸುತ್ತ, ಅಕ್ಷರಗಳಿಗೆ ಜೀವ ತುಂಬಿದ 39 ಸಾವಿರ ಕನ್ನಡ ಬರಹಗಾರರು, ಓದುಗರು ಮತ್ತು ಕನ್ನಡಾಭಿಮಾನಿಗಳೇ ಈ ಸಾಹಿತ್ಯ ವೇದಿಕೆಯ ನಿಜವಾದ ಶಕ್ತಿ.

ಪ್ರತಿಯೊಂದು ಕಥೆ, ಪ್ರತಿಯೊಂದು ಕವಿತೆ, ಪ್ರತಿಯೊಂದು ಲೇಖನ ಮತ್ತು ಪ್ರತಿಯೊಂದು ಓದು ಈ ವೇದಿಕೆಯನ್ನು ಮತ್ತಷ್ಟುಶ್ರೀಮಂತಗೊಳಿಸಿದೆ.ತಮ್ಮಸಮಯ, ಚಿಂತನೆ ಮತ್ತು ಸೃಜನಶೀಲತೆಯನ್ನು ಕನ್ನಡಕ್ಕಾಗಿ ಅರ್ಪಿಸಿದ ಪ್ರತಿಯೊಬ್ಬ ಸದಸ್ಯರೂ "ನಮ್ಮ ಕಥಾ ಅರಮನೆ"ಯ ಬೆಳವಣಿಗೆಯ ಸಹಸೃಷ್ಟಿಕರ್ತರು.

ಸಂಸ್ಥಾಪಕರು ಕನಸು ಕಂಡರು, ನಿರ್ವಾಹಕರು ಅದನ್ನು ಬೆಳೆಸಿದರು, ಆದರೆ ಆ ಕನಸಿಗೆ ಜೀವ ತುಂಬಿದವರು ಸದಸ್ಯರು. ಅವರ ಬರಹ, ಓದು ಮತ್ತು ಪ್ರೋತ್ಸಾಹವೇ ಇಂದು "ನಮ್ಮ ಕಥಾ ಅರಮನೆ"ಯನ್ನು ಸಾವಿರಾರು ಹೃದಯಗಳನ್ನು ಬೆಸೆಯುವ ಕನ್ನಡದ ಜೀವಂತ ಸಾಹಿತ್ಯ ಕುಟುಂಬವನ್ನಾಗಿ ರೂಪಿಸಿದೆ. ಕನ್ನಡವನ್ನು ಪ್ರೀತಿಸಿ, ಕನ್ನಡದಲ್ಲಿ ಯೋಚಿಸಿ, ಕನ್ನಡದಲ್ಲಿ ಬರೆಯುವ ಪ್ರತಿಯೊಬ್ಬ ಸದಸ್ಯರಿಗೂ ಈ ಸಾಹಿತ್ಯ ವೇದಿಕೆ ಸದಾ ಋಣಿಯಾಗಿದೆ.




"ನಮ್ಮ ಕಥಾ ಅರಮನೆ " ತಂಡ

ಕಥಾ ಅರಮನೆಯ ಈ ಸಾಹಿತ್ಯ ಪಯಣದ ಎಲ್ಲಾ ರೂವಾರಿಗಳಿಗೆ ನಮ್ಮ ಕಥಾ ಅರಮನೆಯ ಎಂಟನೇ ವಾರ್ಷಿಕೋತ್ಸವದ ಶುಭಾಶಯಗಳು

ಲೇಖನ
– ಡಾ. ರಾಜಶೇಖರ ನಾಗೂರ
ಸಂಚಾಲಕರು
'ನಮ್ಮ ಕಥಾ ಅರಮನೆ'



# "ನಮ್ಮ ಕಥಾ ಅರಮನೆ" ಮುನ್ನಡೆಸುವ ರೂವಾರಿ ಡಾ.ರಾಜಶೇಖರ ನಾಗೂರ

**'ನಮ್ಮ ಕಥಾ ಅರಮನೆ' ಸಂಚಾಲಕ ಡಾ.ರಾಜಶೇಖರ ನಾಗೂರ ಹೊಸ ಬರಹಗಾರರಿಗೆ ಮಾರ್ಗದರ್ಶಕರು. ಎಲ್ಲರನ್ನೂ ಸಮಾನವಾಗಿ ಕಾಣುವ ಸಾರಥಿ. 'ನಮ್ಮ ಕಥಾ ಅರಮನೆ'ಯ ನಾಡಿಮಿಡಿತ - ಲೇಖಕಿ**

■ **ಉದಯರಶ್ಮಿ ದಿನಪತ್ರಿಕೆ**

ಉತ್ತಮ ವ್ಯಕ್ತಿಯೆಂದರೆ ಎತ್ತರಕ್ಕೇರುವುದು ಅಲ್ಲ, ಎತ್ತರಕ್ಕೇರಿದ ನಂತರವೂ ವಿನಯದಿಂದ ಬಾಗುವುದು. ಮಾತಿಗಿಂತ ನಡತೆಯೇ ಅವರ ಪರಿಚಯ, ಮಾನವೀಯತೆಯೇ ಅವರ ನಿಜವಾದ ಆಭರಣ.

ಕಾಕತಾಳೀಯವೋ, ಕನ್ನಡ ಭುವನೇಶ್ವರಿಯ ಸಂಕೇತವೋ ತಿಳಿಯದು. ಕನ್ನಡ ರಾಜ್ಯೋತ್ಸವದ ದಿನವೇ (ನವೆಂಬರ್ 1) ಜನಿಸಿದ ಅಪ್ಪಟ ಕನ್ನಡಾಭಿಮಾನಿ. ವೃತ್ತಿಯಲ್ಲಿ ಪಶುವೈದ್ಯರಾಗಿ ಸೇವೆ ಸಲ್ಲಿಸಿ, ಇಂದು ಉನ್ನತ ಹುದ್ದೆಯಲ್ಲಿದ್ದರೂ ಸಮಯದ ಅಭಾವದ ನಡುವೆಯೂ ಕನ್ನಡಕ್ಕಾಗಿ ತನ್ನ ತನು-ಮನವನ್ನು ಮುಡಿಪಾಗಿಟ್ಟಿರುವ ಶ್ರಮಿಕ ವ್ಯಕ್ತಿತ್ವ, ನಮ್ಮ ಕಥಾ ಅರಮನೆಯ ಸಂಚಾಲಕರಾದ ಡಾ.ರಾಜಶೇಖರ ನಾಗೂರ ಅವರದು.

ಪ್ರವೃತ್ತಿಯಲ್ಲಿ ಅವರು ಕೈಯಾಡಿಸಿದ ವಿಷಯಗಳು ಒಂದೆರಡಲ್ಲ. ಯಾವುದೇ ವಿಷಯವಾಗಿರಲಿ, ಅದರ ಬಗ್ಗೆ ನಿರರ್ಗಳವಾಗಿ, ಮನಮುಟ್ಟುವ ರೀತಿಯಲ್ಲಿ ಗಂಟೆಗಟ್ಟಲೆ ಮಾತನಾಡಬಲ್ಲ ಅಪರೂಪದ ವಾಗ್ಮಿ. ಎಲ್ಲರನ್ನೂ ಸಮಾನವಾಗಿ ಕಾಣುವ ಸಮತೋಲನದ ವ್ಯಕ್ತಿತ್ವ ಅವರದು.

'ಒಲವಧಾರೆ' ಎಂಬ ಅಂಕಣದ ಮೂಲಕ ಓದುಗರ ಮನಸೂರೆಗೊಳ್ಳುವ ಚುಟುಕುಗಳು, ಕವಿತೆಗಳು ಮತ್ತು ಭಾವಪೂರ್ಣ ಬರಹಗಳನ್ನು ಯಾವುದೇ ಆಡಂಬರವಿಲ್ಲದೆ, ಕಠಿಣ ಪದಗಳ ಬಳಕೆಯಿಲ್ಲದೆ, ಸಾಮಾನ್ಯರ ಮನಸ್ಸಿಗೆ




ಹತ್ತಿರವಾಗುವಂತೆ ಅಭಿವ್ಯಕ್ತಗೊಳಿಸುವ ನಿರೂಪಕರು ಅವರು.

'ಧ್ವನಿಧಾರೆ' ಮೂಲಕ ಹೊಸಹೊಸ ವಿಚಾರಗಳನ್ನು ಸರಳವಾಗಿ, ಸ್ಪಷ್ಟವಾಗಿ ಮನದಟ್ಟು ಮಾಡುವ ಸಲಹೆಗಾರರು. 'ಸಿಂಚನ' ಕಾರ್ಯಕ್ರಮದ ಮೂಲಕ ವಾರಕ್ಕೊಂದು ನೀತಿಕಥೆಯನ್ನು ತಮ್ಮ ಸೊಗಸಾದ ಧ್ವನಿಯಲ್ಲಿ ಹೇಳುತ್ತಾ ಸಾವಿರಾರು ಜನರ ಮನದಲ್ಲಿ ಅಳಿಯದ ಛಾಪು ಮೂಡಿಸಿದ ಮಾಂತ್ರಿಕ. ತಮ್ಮದೇ ಆದ ವಿಶಿಷ್ಟ ಧ್ವನಿಯಿಂದ ಕೇಳುಗರ ಮನಸ್ಸಿಗೆ ನೆಮ್ಮದಿ, ಧೈರ್ಯ ಮತ್ತು ಚೈತನ್ಯ ತುಂಬುವ ಚೇತನ ನಮ್ಮ ಡಾ.ರಾಜಶೇಖರ ನಾಗೂರ.

ನಮ್ಮ ಕಥಾ ಅರಮನೆಯಲ್ಲಿ ನಾಲ್ಕು-ಐದು ವರ್ಷಗಳಿಂದ ತಮ್ಮದೇ ಆದ ಛಾಪು ಮೂಡಿಸಿರುವ ಅವರು, ಕಳೆದ ಎರಡು ವರ್ಷಗಳಿಂದ ಹೊಸ ತಂಡದೊಂದಿಗೆ ಹೊಸ ಉತ್ಸಾಹವನ್ನು ತುಂಬಿದ್ದಾರೆ. ಅವರು ಪರಿಚಯಿಸಿದ 'ಕೊಲ್ಯಾಬ್' (ತಾವು ನೀಡುವ ಒಲವಿನ ಸಾಲುಗಳಿಗೆ ಪ್ರತಿಯಾಗಿ ಸಂಭಾಷಣೆಯ ರೂಪದಲ್ಲಿ ಸದಸ್ಯರು ಬರೆಯುವ ವಿನೂತನ ಪ್ರಯೋಗ) ಇಂದು ಅಪಾರ ಜನಪ್ರಿಯತೆಯನ್ನು ಗಳಿಸಿದೆ. ಬುಧವಾರಕ್ಕಾಗಿ ಸದಸ್ಯರು ಕಾತರದಿಂದ ಕಾಯುವುದು ಇದಕ್ಕೆ ಸಾಕ್ಷಿ.

ಕನ್ನಡ ಉಳಿಸಿ ಬೆಳೆಸುವ ನಿಟ್ಟಿನಲ್ಲಿ, ಕನ್ನಡ ರಾಜ್ಯೋತ್ಸವವನ್ನು ಕೇವಲ ನವೆಂಬರ್ 1 ಕ್ಕೆ ಸೀಮಿತಗೊಳಿಸದೆ, ಇಡೀ ತಿಂಗಳು ಕನ್ನಡ ಮತ್ತು ಕರ್ನಾಟಕಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಚುಟುಕುಗಳನ್ನು ನೀಡಿ, ಸದಸ್ಯರಿಂದ ಲಕ್ಷಾಂತರ ಬರಹಗಳನ್ನು ಬರೆಯಿಸಿ ತಾಯಿ ಭುವನೇಶ್ವರಿಗೆ ನುಡಿನಮನ ಸಲ್ಲಿಸುವ ಮಹತ್ತರ ಕಾರ್ಯವನ್ನು ಮಾಡಿದ್ದಾರೆ. ನಿಜಕ್ಕೂ ಅವರು ಸರಸ್ವತಿಯ ವರಪುತ್ರರು.

ಜನವರಿ 18, 2026 ರಂದು ನಡೆದ ನಮ್ಮ ಕಥಾ ಅರಮನೆಯ ಅದ್ಭುತವಾದ ವಾರ್ಷಿಕ ಸ್ನೇಹ ಸಮ್ಮೇಳನಕ್ಕೆ ಕಾರಣರದವರು ಮತ್ತು ಅಂದಿನ ಕಾರ್ಯಕ್ರಮದ ಗಣ್ಯರ ಸಮ್ಮುಖದಲ್ಲಿ ಅವರ ಮೂರು ಕೃತಿಗಳ ಅನಾವರಣ ನಡೆಯಿತು.

**ಕಾರ್ಯಕ್ರಮದ ಗಣ್ಯರು:**



**ಶ್ರೀ ಟಿ. ಎನ್. ಸೀತಾರಾಮ್ ಖ್ಯಾತ ಧಾರಾವಾಹಿ ಹಾಗೂ ಚಲನಚಿತ್ರ ನಿರ್ದೇಶಕರು**

**- ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ ಖ್ಯಾತ ಹೃದಯ ತಜ್ಞರು ಹಾಗೂ ಸಾಹಿತಿ**

**ಶ್ರೀ ವೀರಕಪುತ್ರ ಶ್ರೀನಿವಾಸ ಪುಸ್ತಕ ಸಂತೆಯ ಹರಿಕಾರ**

**ಶ್ರೀ ಗೌರೀಶ್ ಅಕ್ಕಿ ಖ್ಯಾತ ನಿರೂಪಕರು ಹಾಗೂ ನಟರು**

**ಶ್ರೀ ರವಿ ಆರ್. ಗರಣಿ ಖ್ಯಾತ ಚಲನಚಿತ್ರ ನಿರ್ಮಾಪಕರು ಹಾಗೂ ನಿರ್ದೇಶಕರು**

**ಶ್ರೀ ಇಂದುಶೇಖರ್ ಮಣೂರ - ಉದಯರಶ್ಮಿ ದಿನ ಪತ್ರಿಕೆಯ ಸಂಪಾದಕರು**

**ಶ್ರೀ ಖರಿ ಪ್ರದೀಪ್ 92.7 ಈಒ ನ ನೆನಪಿನ ನಾವಿಕ ರೇಡಿಯೋ ನಿರೂಪಕರು.**

**ಶ್ರೀ ಗುಡ್ಡಣ್ಣ ನಮ್ಮ ಕಥಾ ಅರಮನೆ ಸಂಸ್ಥಾಪಕರು ಅವರ ಸಮ್ಮುಖದಲ್ಲಿ ಬಿಡುಗಡೆಯಾದ ಡಾ. ರಾಜಶೇಖರ ರವರ ಕೃತಿಗಳು:**

1. **ಒಲವಧಾರೆ**
2. **ಮನಮಂಥನ**
3. **ಸ್ಪಾರ್ಕ್ 1**

ಈ ಮೂರು ಪುಸ್ತಕಗಳೂ ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ. ವಿಶೇಷವಾಗಿ 'ಸ್ಪಾರ್ಕ್' ಕೃತಿಯನ್ನು ಓದಿದ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದು, ಅದರಲ್ಲಿರುವ ಬರಹಗಳು ನೊಂದ ಮನಗಳಿಗೆ ಸಾಂತ್ವನ, ಬದುಕಿಗೆ ಹೊಸ ಚೈತನ್ಯ ಮತ್ತು ಹಲವರಿಗೆ ಮಾರ್ಗದರ್ಶನ ನೀಡುವ ದಾರಿದೀಪವಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

"ಕನ್ನಡವೇ ಹಸಿರು, ಕನ್ನಡವೇ ಉಸಿರು" ಎಂಬ ನಂಬಿಕೆಯಿಂದ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಡಾ.ರಾಜಶೇಖರ ನಾಗೂರ ಅವರ ಜನ್ಮದಿನವೂ ನವೆಂಬರ್ 1ರಂದು ಎಂಬುದು ಕನ್ನಡ ಭುವನೇಶ್ವರಿಯ ಸಂಕೇತವೇನೋ ಎನ್ನುವ ಭಾವ ಮೂಡಿಸುತ್ತದೆ. "ಆಡು ಮುಟ್ಟದ ಸೊಪ್ಪಿಲ್ಲ, ಡಾ.ರಾಜಶೇಖರ ನಾಗೂರ ಅವರು ಬರೆಯದ ವಿಷಯವಿಲ್ಲ" ಎಂಬ ಮಾತು ಅವರಿಗೆ ಅಕ್ಷರಶಃ ಅನ್ವಯಿಸುತ್ತದೆ.

ನಮ್ಮ ಕಥಾ ಅರಮನೆಯ ಸಂಚಾಲಕರಾಗಿ ತಮ್ಮ ಬರಹಗಳ ಮೂಲಕ ಸದಸ್ಯರ ಮನ ಗೆದ್ದಿರುವ ಅವರು, ನಮ್ಮಂತಹ ಹೊಸ ಬರಹಗಾರರಿಗೆ ಮಾರ್ಗದರ್ಶನ ನೀಡುವ ಮಾರ್ಗದರ್ಶಕರು. ಎಲ್ಲರನ್ನೂ ಸಮಾನವಾಗಿ ಕಾಣುವ ಸಾರಥಿ. ಒಟ್ಟಾರೆಯಾಗಿ ಹೇಳುವುದಾದರೆ 'ನಮ್ಮ ಕಥಾ ಅರಮನೆಯ ನಾಡಿಮಿಡಿತ'.

ಡಾ. ರಾಜಶೇಖರ ನಾಗೂರ ಅವರಿಗೆ ಅವರು ಕಂಡಿರುವ ಎಲ್ಲ ಕನಸುಗಳು ನನಸಾಗಲಿ. ದೇವರು ಅವರಿಗೆ ಉತ್ತಮ ಆರೋಗ್ಯ, ಆಯುರಾರೋಗ್ಯ ಮತ್ತು ಇನ್ನಷ್ಟು ಕನ್ನಡಸೇವೆಯನ್ನು ಮಾಡುವ ಶಕ್ತಿ ನೀಡಲಿ ಎಂದು ನಮ್ಮ ಕಥಾ ಅರಮನೆಯ ಸಮಸ್ತ ಬಳಗದ ಪರವಾಗಿ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಲೇಖನ
■ **ಶೀತಲ್ ಹೆಗಡೆ**
ನಿರ್ವಾಹಕಿ
"ನಮ್ಮ ಕಥಾ ಅರಮನೆ"



# ವಾಂಕ್‌ಚುಕ್ ಬಂಧನ ಹಾಗೂ ವಿದ್ಯಾರ್ಥಿಗಳ ಮೇಲಿನ ಲಾಠಿ ಚಾರ್ಜ್ ಖಂಡನೆ

ಕಲಬುರಗಿ : ಶಿಕ್ಷಣ ತಜ್ಞ ಹಾಗೂ ಪರಿಸರವಾದಿ ಸೋನಮ್ ವಾಂಕ್‌ಚುಕ್ ಅವರನ್ನು ಬಲವಂತವಾಗಿ ಬಂಧಿಸಿರುವುದು ಮತ್ತು ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜ್ ಹಾಗೂ ಟಿಯರ್ ಗ್ಯಾಸ್ ಪ್ರಯೋಗಿಸಿರುವ ಕ್ರಮವನ್ನು ಕರ್ನಾಟಕ ವಿದ್ಯಾರ್ಥಿ ಸಂಘಟನೆ ತೀವ್ರವಾಗಿ ಖಂಡಿಸಿದೆ ಎಂದು ಜಿಲ್ಲಾ ಸಂಚಾಲಕ ರಾಜೇಂದ್ರ ರಾಜವಾಳ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆ ಸುಗಮವಾಗಿ ಕಾರ್ಯನಿರ್ವಹಿಸಬೇಕಾದರೆ ಚುನಾವಣೆಗಳು ಮತ್ತು ಸಾಂಸ್ಥಿಕ ವ್ಯವಸ್ಥೆಗಳ ಜೊತೆಗೆ ಜನರ ಸಕ್ರಿಯ ಭಾಗವಹಿಸುವಿಕೆ ಅತ್ಯಗತ್ಯವಾಗಿದೆ. ಪ್ರತಿಭಟನೆ ಕೂಡ ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗವಾಗಿದೆ ಎಂದು ಹೇಳಿದ್ದಾರೆ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳಿಂದ ದೇಶದಾದ್ಯಂತ ವಿದ್ಯಾರ್ಥಿಗಳು ಮತ್ತು ಪೋಷಕರು ಆತಂಕಕ್ಕೆ ಒಳಗಾಗಿದ್ದು, ಹಲವು ವಿದ್ಯಾರ್ಥಿಗಳು ಪ್ರಾಣ ಕಳೆದುಕೊಂಡಿರುವುದು ಅತ್ಯಂತ ದುಃಖಕರ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಪರವಾಗಿ ಹಾಗೂ ಮೃತ ವಿದ್ಯಾರ್ಥಿಗಳ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿ ದೆಹಲಿಯ ಜಂತರ್-ಮಂತರ್ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ ಎಂದು ಅವರು ತಿಳಿಸಿದ್ದಾರೆ.

ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳಿಗೆ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು ಎಂಬ ಆಗ್ರಹ ದೇಶಾದ್ಯಂತ ವ್ಯಕ್ತವಾಗುತ್ತಿದೆ. ಆದರೆ ಸರ್ಕಾರ ಯಾವುದೇ ಸ್ಪಂದನೆ ನೀಡದಿರುವುದು ಖಂಡನೀಯ. ಬದಲಾಗಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಸೋನಮ್ ವಾಂಕ್‌ಚುಕ್ ಅವರನ್ನು ಬಂಧಿಸಿರುವುದು ಹಾಗೂ ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜ್ ಮತ್ತು ಟಿಯರ್ ಗ್ಯಾಸ್ ಪ್ರಯೋಗಿಸಿರುವುದು ಅಮಾನವೀಯ ಮತ್ತು ಸರ್ವಾಧಿಕಾರಿ ಧೋರಣೆಯಾಗಿದೆ ಎಂದು ರಾಜೇಂದ್ರ ರಾಜವಾಳ ಆರೋಪಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ರಾಷ್ಟ್ರಪತಿಗಳು ಮಧ್ಯಪ್ರವೇಶಿಸಿ ವಿದ್ಯಾರ್ಥಿಗಳು ಹಾಗೂ ಪೋಷಕರ ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ. ಕರ್ನಾಟಕ ವಿದ್ಯಾರ್ಥಿ ಸಂಘಟನೆಯ ಪ್ರಮುಖ ಹಕ್ಕೊತ್ತಾಯಗಳು: ಲಾಠಿ ಚಾರ್ಜ್ ಮತ್ತು ಟಿಯರ್ ಗ್ಯಾಸ್ ಬಳಕೆಗೆ ಆದೇಶ ನೀಡಿದ ಅಧಿಕಾರಿಗಳನ್ನು ಸೇವೆಯಿಂದ ವಜಾಗೊಳಿಸಬೇಕು, ಬಡ ಹಾಗೂ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿರುವ ನೀಟ್ ಪರೀಕ್ಷಾ ಪದ್ಧತಿಯನ್ನು ರದ್ದುಪಡಿಸಬೇಕು, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು ಹಾಗೂ ಸೋನಮ್ ವಾಂಕ್‌ಚುಕ್ ಅವರನ್ನು ತಕ್ಷಣ ಬಿಡುಗಡೆ ಮಾಡಬೇಕು, ಮೃತ ವಿದ್ಯಾರ್ಥಿಗಳ ಕುಟುಂಬಗಳಿಗೆ ತಲಾ ಒಂದು ಕೋಟಿ ರೂಪಾಯಿ ಪರಿಹಾರಧನ ನೀಡಬೇಕು.

ಈ ಬೇಡಿಕೆಗಳನ್ನು ಸರ್ಕಾರ ಕೂಡಲೇ ಈಡೇರಿಸದಿದ್ದಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ರೂಪಿಸಲಾಗುವುದು ಎಂದು ಕರ್ನಾಟಕ ವಿದ್ಯಾರ್ಥಿ ಸಂಘಟನೆಯ ಜಿಲ್ಲಾ ಸಂಚಾಲಕ ರಾಜೇಂದ್ರ ರಾಜವಾಳ ಎಚ್ಚರಿಸಿದ್ದಾರೆ.

# ಮಕ್ಕಳಲ್ಲಿ ಒಳ್ಳೆಯ ಅಭ್ಯಾಸಗಳ ರೂಢಿ

**ನಾವು - ನಮ್ಮವರು**
**(ಮಕ್ಕಳ ಬೆಳವಣಿಗೆಯಲ್ಲಿ ಪಾಲಕರ ಪಾತ್ರ ಕುರಿತ ಲೇಖನ ಮಾಲಿಕೆ)**

■ **ಉದಯರಶ್ಮಿ ದಿನಪತ್ರಿಕೆ**





ಜೀವಂತ ವ್ಯಕ್ತಿಯ ಹೃದಯ ಮತ್ತು ಮೆದುಳುಗಳು ದಿನದ 24 ಗಂಟೆ, ವರ್ಷದ 365 ದಿವಸ ಮತ್ತು ಜೀವಿತದ ಕೊನೆಯವರೆಗೂ ತಮ್ಮ ಕಾರ್ಯವನ್ನು ನಿರ್ವಹಿಸುತ್ತದೆ. ವಿಶ್ರಾಂತಿ ಎಂಬುದು ಈ ಅಂಗಗಳಿಗೆ ಇಲ್ಲ. ಹೃದಯದ ಆರೋಗ್ಯವನ್ನು ಕಾಯ್ದುಕೊಳ್ಳಲು ನಾವು ಒಳ್ಳೆಯ ಆಹಾರ-ವಿಹಾರ, ದೈಹಿಕ ವ್ಯಾಯಾಮ, ಯೋಗ, ಧ್ಯಾನ, ಜಪ-ತಪ ಸತ್ಸಂಗಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಮೆದುಳಿನ ಆರೋಗ್ಯವನ್ನು ಕಾಯ್ದುಕೊಳ್ಳಲು ಸಜ್ಜನರ ಸಹವಾಸ ಮಾಡಬೇಕು ಒಳ್ಳೆಯ ಪರಿಸರದಲ್ಲಿ ಬದುಕನ್ನು ಕಟ್ಟಿಕೊಳ್ಳಬೇಕು.

ಇದೀಗ ಪರೀಕ್ಷಾ ಸಮಯದಲ್ಲಿ ನಾವು ಪ್ರತಿಯೊಂದು ಮನೆಗಳಲ್ಲಿ ಕೇಳುವುದು ಒಂದೇ ಮಾತು ಪರೀಕ್ಷೆ ಬಂದಿದೆ, ಚೆನ್ನಾಗಿ ಅಭ್ಯಾಸ ಮಾಡು ಎಂದು. ಹಾಗಾದರೆ ಅಭ್ಯಾಸ ಎಂದರೇನು? ಎಂದು ಪ್ರಶ್ನಿಸಿಕೊಂಡಾಗ ನಾವು ಕಲಿತ ವಿಷಯವನ್ನು ಮನನ ಮಾಡಿಕೊಳ್ಳುವ ಓದುವ ಬರೆಯುವ ಮೂಲಕ ಪುನರಾವರ್ತಿಸುವ ಕಾರ್ಯವನ್ನು ಅಭ್ಯಾಸ ಎಂದು ಹೇಳಬಹುದು.

ಬದುಕಿನಲ್ಲಿ ಬರುವ ಯಾವುದೇ



ವಿಷಯಗಳನ್ನು ಅರಿಯಲು ನಮ್ಮಲ್ಲಿ ಅಭ್ಯಾಸದ ಅವಶ್ಯಕತೆ ಇದೆ. ಹೊಸ ವಿಷಯಗಳನ್ನು ಅರಿಯುವ, ಕಲಿಯುವ, ಮನನ ಮಾಡಿಕೊಳ್ಳುವ ಮತ್ತು ಅವುಗಳನ್ನು ಪ್ರಾಯೋಗಿಕವಾಗಿ ಕಾರ್ಯರೂಪಕ್ಕೆ ತರುವ ಮೂಲಕ ಅಭ್ಯಾಸಕ್ಕೆ ಹೊಸ ಆಯಾಮವನ್ನು ನೀಡಬಹುದು.

ಅಟೆಂಷನ್ ಎಂದರೆ ಏಕಾಗ್ರತೆ ಎಂದರ್ಥ

ಕರೋನ ಪ್ಯಾಂಡಮಿಕ್ ಗೆ ಮುನ್ನ ಪ್ರತಿಯೊಬ್ಬ ವ್ಯಕ್ತಿಯ ಸರಾಸರಿ ಏಕಾಗ್ರತೆ ಏಳು ಸೆಕೆಂಡುಗಳ ಕಾಲ ಇದ್ದು ಪ್ಯಾಂಡೆಮಿಕ್ ನ ನಂತರ ಅದು ಮೂರು ಸೆಕೆಂಡುಗಳಿಗೆ ಇಳಿಮುಖವಾಗಿದೆ. ಅಂದರೆ ಎಲ್ಲ ವಿಷಯಗಳಲ್ಲಿಯೂ ನಮಗೆ ಆಸಕ್ತಿಯು ಕುಂಠಿತವಾಗಿರುವುದು ಸ್ಪಷ್ಟ ಗೋಚರವಾಗುತ್ತಿದೆ.

ಮಹಾನಗರದಲ್ಲಿ ಕಾರ್ಯನಿರ್ವಹಿಸುವ ಉದ್ಯೋಗಿ 'ಅಯ್ಯೋ ನಂದೂ ಒಂದು ಬಾಳೇ? ಪ್ರತಿ ದಿನ ಎದ್ದು ತಯಾರಾಗಿ ಡಬ್ಬಿ ಹಿಡಿದುಕೊಂಡು ಈ ಹಾಳು ಟ್ರಾಫಿಕ್ ನಲ್ಲಿ ಗುದ್ದಾಡಿಕೊಂಡು ಕೆಲಸಕ್ಕೆ ಹೋಗಬೇಕು ಎಂದು ಗೋಳಾಡಿಕೊಂಡು ಹೇಳುವನು. ತನ್ನ ಕೆಲಸದಲ್ಲಿ ಆಸಕ್ತಿಯನ್ನು ಕಳೆದುಕೊಳ್ಳಬಾರದು. ಇದು ತನ್ನ ದೈನಂದಿನ ಕೆಲಸ ತಾನಿದನ್ನು ಮಾಡಲೇಬೇಕು ತನ್ನ ಬದುಕನ್ನು ನಿರ್ವಹಿಸಲು ಈ ಕೆಲಸ ತನಗೆ ಅನಿವಾರ್ಯ ಎಂಬುದನ್ನು ಅರಿತುಕೊಂಡರೆ ಮಾತ್ರ ಗೊಣಗುವುದನ್ನು ಬಿಡುತ್ತಾನೆ. ಅಂತಹ ವ್ಯಕ್ತಿ ಹೀಗೆ ಗೋಳಾಡುವುದನ್ನು ಬಿಡಬೇಕು ಇಲ್ಲವೇ ಕೆಲಸವನ್ನು ಬಿಡಬೇಕು. ಎರಡನೆಯದನ್ನು ಬಿಡಲು ಸಾಧ್ಯವಿಲ್ಲವಾದ್ದರಿಂದ ಮೊದಲನೆಯ ಆಯ್ಕೆ ಮಾತ್ರ ಆತನ ಪಾಲಿಗೆ ಇರುತ್ತದೆ.

ಮನೆಯಲ್ಲಿಯೂ ಅಷ್ಟೇ ಕುಟುಂಬದ ಸದಸ್ಯರಲ್ಲಿ ವಿನಾಕಾರಣ ಏನಾದರೂ ಅಂದು ಆಡುವವರು ಅದರ ಮುಂದಿನ ಪರಿಣಾಮಗಳನ್ನು ಎದುರಿಸಲು ಸಿದ್ಧರಾಗಿರಬೇಕು. ಅಥವಾ ಹಾಗೆ ಎದುರಿಸಲು ಅಭ್ಯಾಸ ಮಾಡಿಕೊಳ್ಳಲೇಬೇಕು.

ಹೈಸ್ಕೂಲಿನ ಹಂತದಲ್ಲಿರುವ ಮಕ್ಕಳು ತಮ್ಮ ಬದುಕಿನ ಕುರಿತು ಕೆಲ ವಿಷಯಗಳನ್ನು ನಿರ್ದಿಷ್ಟವಾಗಿ ಮಾತನಾಡುತ್ತಾರೆ. ಬದುಕಿನಲ್ಲಿ ಡಾಕ್ಟರ್, ಇಂಜಿನಿಯರ್, ಚಾರ್ಟೆಡ್ ಅಕೌಂಟೆಂಟ್, ಶಿಕ್ಷಕರು, ಬ್ಯಾಂಕ್ ಮ್ಯಾನೇಜರ್ ಹೀಗೆ ಹತ್ತು ಹಲವು ಆಯ್ಕೆಗಳು ಅವರ ಮುಂದೆ ಇದ್ದು ಅದರಲ್ಲಿ ತಮ್ಮಿಷ್ಟದ ವಿಷಯವನ್ನು ಕಲಿಯಲು ಬೇಕಾಗುವ ವಿದ್ಯಾರ್ಹತೆಯ ಕುರಿತು ಅವರಿಗೆ ಸೂಕ್ಷ್ಮ ಅವಗಾಹನೆ ಇರುತ್ತದೆ.. ಇರಬೇಕು ಕೂಡ. ಆ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲು ಅವರು ಇಂದಿನಿಂದಲೇ ತಮ್ಮ ತಯಾರಿಯನ್ನು ಮಾಡಿಕೊಳ್ಳಬೇಕು ಅಂದಾಗ ಮಾತ್ರ ತಮ್ಮ ಬದುಕಿನ ಗುರಿಯನ್ನು ತಲುಪಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪಾಲಕರು ಕೂಡ ಮಕ್ಕಳಲ್ಲಿ ಚಿಕ್ಕಂದಿನಿಂದಲೇ ಮಕ್ಕಳ ಆಯ್ಕೆಯ ವಿಷಯದ ಕುರಿತು ಅಭ್ಯಾಸ ಮಾಡಿಸಲೇಬೇಕು.

ಯಾವುದೇ ವಿಷಯವನ್ನು ಸತತ 21 ದಿನಗಳ ಕಾಲ ಅಭ್ಯಾಸ ಮಾಡುತ್ತಾ ಹೋದರೆ ಅದು ಅಭ್ಯಾಸವಾಗಿ ಪರಿಣಮಿಸುತ್ತದೆ ಎಂಬ ಮಾತು ಎಲ್ಲರಿಗೂ ಗೊತ್ತು, ಆದರೂ ಕೂಡ ಬಹಳಷ್ಟು ಜನ 'ಯುದ್ಧಕಾಲೇ ಶಸ್ತ್ರಾಭ್ಯಾಸ' ಎಂಬಂತೆ ವರ್ಷವಿಡೀ ಹಾಳು ಹರಟೆ,, ಓಡಾಟ ಮುಂತಾದ ವಿಷಯಗಳಲ್ಲಿ ಕಾಲ ಕಳೆದು ಪರೀಕ್ಷೆಯ ಸಮಯದಲ್ಲಿ ಗಡಿಬಿಡಿಯಿಂದ ಎಲ್ಲವನ್ನು ಓದಿ ಅರಗಿಸಿಕೊಳ್ಳಲು ಪ್ರಯತ್ನಿಸುತ್ತಾರೆ, ಮತ್ತೆ ಕೆಲವರು ಉರು ಹೊಡೆಯುತ್ತಾರೆ.. ಇವೆರಡೂ ತಪ್ಪು.

ಶಾಲೆಯ ಆರಂಭದ ದಿನಗಳಿಂದಲೂ ಪ್ರತಿ ಪಾಠದ ನಂತರ ಅವುಗಳನ್ನು ಓದಿ ಬರೆದು ಪುನರ್ ಮನನ ಮಾಡಿಕೊಳ್ಳುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು.

ಒಂದೊಂದಾಗಿ ಬೇಡವೆನಿಸಿದ ವಿಷಯಗಳನ್ನು ದೂರ ಇಡುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಉದಾಹರಣೆಗೆ ಪ್ಲಾಸ್ಟಿಕ್ ಬಟ್ಟಲು ಚಮಚ ತಟ್ಟೆಗಳನ್ನು ಇನ್ನು ಮುಂದೆ ಬಳಸಬಾರದು ಎಂದುಕೊಳ್ಳುವ ವ್ಯಕ್ತಿ ಮನೆಯಲ್ಲೇ ಇರಲಿ, ಪ್ರವಾಸದಲ್ಲೇ ಇರಲಿ, ಸಮಾರಂಭಗಳಿಗೆ ಹೋಗಿರಲಿ ಅಲ್ಲಿ ಕೊಡುವ ಬಟ್ಟಲಿನಲ್ಲಿ ಆಹಾರ ಪದಾರ್ಥಗಳನ್ನು ಬಳಸುವುದನ್ನು ಬಿಟ್ಟಾಗ, ಪ್ಲಾಸ್ಟಿಕ್ ಲೋಟದಲ್ಲಿ ನೀರನ್ನು ಕುಡಿಯುವುದನ್ನು ಬಿಟ್ಟಾಗ ಅದು ಆತನಿಗೆ ಅಭ್ಯಾಸವಾಗಿಯೇ ಹೋಗುತ್ತದೆ. ಮುಂದೆ ಇದು ಆತನ ರೂಢಿಯಲ್ಲಿ ಉಳಿದು ನಿವಾಸದಲ್ಲಿಯೇ ಆಗಲಿ ಪ್ರವಾಸದಲ್ಲಿಯೇ ಇರಲಿ ಆತ ತನ್ನ



ಅಭ್ಯಾಸಕ್ಕೆ ಬದ್ಧನಾಗಿ ಇರುತ್ತಾನೆ.

ನಮ್ಮ ದೈನಂದಿನ ಬದುಕಿನಲ್ಲಿಯೂ ಒಳ್ಳೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳಲೇಬೇಕು.

ಪ್ರತಿದಿನ ಎರಡುವರೆಯಿಂದ 3 ಲೀಟರ್ ನೀರು ಕುಡಿಯಬೇಕು ಎಂಬುದು ಗೊತ್ತಿದ್ದರೂ ತೊಂದರೆಯಾದಾಗ ಒಂದೆರಡು ದಿನ ಕುಡಿದು ಮತ್ತೆ ಬಿಟ್ಟುಬಿಡುವರು.. ಇದು ತಪ್ಪು ಎಂದು ಗೊತ್ತಿದ್ದೂ ಕೂಡ ತಪ್ಪು ಮಾಡುವ ಬೆಪ್ಪತನ ನಮ್ಮದಾಗಬಾರದು.

ಕಡ್ಡಾಯವಾಗಿ ದಿನಕ್ಕೆ ಕನಿಷ್ಠ ಎರಡೂವರೆ ಲೀಟರ್ ನೀರನ್ನು ಕುಡಿಯುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು.

ಸಮಯಕ್ಕೆ ಸರಿಯಾಗಿ ಬಿಸಿಯಾದ ತಾಜಾ ಆಹಾರವನ್ನು ತಯಾರಿಸಿ ಸೇವಿಸಬೇಕು. ಇದು ಕೂಡ ಒಂದು ಅಭ್ಯಾಸವೇ. ಆಯಾ ಸಮಯಕ್ಕೆ ಸರಿಯಾಗಿ ಕುಟುಂಬದವರ ಜೊತೆಗೆ ಊಟ ಮಾಡುವುದರ ಮೂಲಕ ಮಾನಸಿಕ ಸಂತೃಪ್ತಿಯ ಜೊತೆ ಜೊತೆಗೆ ದೈಹಿಕ ಶಕ್ತಿಗೆ ಅವಶ್ಯಕವಾದ ಆಹಾರ ನಮ್ಮ ಮೈಮನಗಳಲ್ಲಿ ಹುಮ್ಮಸ್ಸನ್ನು, ಶಕ್ತಿಯನ್ನು ತುಂಬುತ್ತದೆ.

ಮನೆಯಲ್ಲಿ ಪುಸ್ತಕ ಸಂಸ್ಕೃತಿ ಬೆಳೆಯಬೇಕು. ವಿವಿಧ ವಾರ ಪತ್ರಿಕೆಗಳು, ಮಾಸಿಕ ಪತ್ರಿಕೆಗಳು, ಪೇಪರ್ ಗಳು ಮನೆಗೆ ಬರುತ್ತಿದ್ದರೆ ಆಸಕ್ತಿ ಇಲ್ಲದಿದ್ದರೂ ಒಂದೊಮ್ಮೆ ಅದರ ಪುಟ ಹೊರಳಿಸುವ, ಯಾವುದಾದರೂ ಕಥೆಯನ್ನು ಇಲ್ಲವೇ ವಿಷಯವನ್ನು ಓದುವ ಮನ ಉಂಟಾಗುತ್ತದೆ. ಆದ್ದರಿಂದ ಪುಸ್ತಕಗಳನ್ನು ಮನೆಯಲ್ಲಿ ತರಿಸಿ ಅವುಗಳನ್ನು ಪಾಲಕರು ತಾವೂ ಓದಿ ಮಕ್ಕಳಲ್ಲೂ ಓದುವ ಹವ್ಯಾಸವನ್ನು ರೂಪಿಸಬೇಕು.

ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಯೋಗ, ವ್ಯಾಯಾಮ, ನಡಿಗೆಗಳನ್ನು ದೈನಂದಿನ ಜೀವನದ ಭಾಗವನ್ನಾಗಿಸಿಕೊಳ್ಳಬೇಕು. ಹೊಸ ವರ್ಷದ

ಮೊದಲ ಒಂದೆರಡು ವಾರ ವಾಕಿಂಗ್, ಯೋಗ, ವ್ಯಾಯಾಮಗಳನ್ನು ಮಾಡಿ ನಂತರ ಬಿಟ್ಟುಬಿಡುವುದು ಅಭ್ಯಾಸವಲ್ಲ.

ಬದುಕಿನುದ್ದಕ್ಕೂ ಉತ್ತಮ ಆಹಾರ, ವಿಹಾರ ವ್ಯಾಯಾಮ ನಡಿಗೆಗಳಿಗೆ ಆದ್ಯತೆಯನ್ನು ನೀಡಿ ಅತ್ಯುತ್ತಮ ಅಭ್ಯಾಸಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ಮೂಲಕ ಒಳ್ಳೆಯ ಜೀವನವನ್ನು

ನಮ್ಮದಾಗಿಸಿಕೊಳ್ಳಬೇಕು.

**ಲೇಖನ**
**- ವೀಣಾ ಹೇಮಂತಗೌಡ ಪಾಟೀಲ್.**
**ಮುಂಡರಗಿ**
**ಗದಗ ಜಿಲ್ಲೆ**






# ಬೋರ್‌ವೆಲ್ ಕೊರೆಸುವ ಮೂಲಕ ನೀರಿನ ಸಮಸ್ಯೆಗೆ ಪರಿಹಾರ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: 4ನೇ ವಾರ್ಡಿನ ಸಾರ್ವಜನಿಕರ ಬೇಡಿಕೆಯಂತೆ ಬೋರ್‌ವೆಲ್ ಕೊರೆಸುವ ಮೂಲಕ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುತ್ತಿದೆ ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಅಫ್ರೋಜ್ ಅಹ್ಮದ್ ಪಟೇಲ ಹೇಳಿದರು.

ಪಟ್ಟಣದ 4ನೇ ವಾರ್ಡಿನಲ್ಲಿ ಗುರುವಾರ ಸಾಯಂಕಾಲ ಬೋರ್‌ವೆಲ್ ಕೊರೆಸುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದರು. ಬೋರ್‌ವೆಲ್ ಮೂಲಕ 3 ಗುಮ್ಮಿಗಳನ್ನು ಅಳವಡಿಸಿ ನೀರು ಪೂರೈಕೆ ಮಾಡಲಾಗುವುದು ಎಂದರು.

ವಾರ್ಡಿನ ಬಿಜೆಪಿ ಧುರೀಣ ಸೋಮು ದೇವೂರ ಮಾತನಾಡಿ, ಪಟ್ಟಣ ಪಂಚಾಯಿತಿ ಸದಸ್ಯರಾದ ತಮ್ಮ ತಾಯಿ ರತ್ನವ್ವ ದೇವೂರರ ಅನುದಾನ ಬಳಕೆ ಮಾಡಿಕೊಂಡು ಈ ಭಾಗದ ಜನರ ನೀರಿನ ಅವಶ್ಯಕತೆಗೆ ಅಗತ್ಯ ಕ್ರಮವಹಿಸಲಾಗಿದೆ. ಇದ-ರಿಂದ ಕನಿಷ್ಠ 3 ವಾರ್ಡುಗಳಿಗೆ ಅನುಕೂಲವಾಗಲಿದೆ ಎಂದರು.

ಮೂರು ದಿನಗಳಲ್ಲಿ ಬೋರ್‌ವೆಲ್ ಕೊರೆಸಿ ನೀರನ್ನು ಶಾಶ್ವತವಾಗಿ ಪೂರೈಸಲಾಗುವುದು ಎಂದು ಹೇಳಿದಂತೆ ನಡೆದ ಮುಖ್ಯಾಧಿಕಾರಿ ಹಾಗೂ ವಾರ್ಡಿನ ಸದಸ್ಯರ ನಡೆಯನ್ನು ವಾರ್ಡಿನ ಗುರುಬಾಯಿ ಬಿರಾದಾರ(ಜೆರ್ಲಿ), ರಜಿನಾಬಾಯಿ ಜೆರ್ಲಿ, ರೂಪಾ ಅಗಸರ, ಶಾರದಾ ಸೌದಿ ಸಹಿತ ಮಹಿಳೆಯರು ಶ್ಲಾಘಿಸಿದ್ದಾರೆ.

ಮಡುಗೌಡ ಬಿರಾದಾರ, ಸುರೇಶ ಬಿರಾದಾರ, ರಾವುತ ಅಗಸರ, ಕುಮಾರ ಸೌದಿ, ರಮೇಶ ದೇವೂರ ಸಿಬ್ಬಂದಿ ಸೋಮು ಭೋವಿ ಇದ್ದರು.



# ನೀಟ್ ಪರೀಕ್ಷೆ ವಿರೋಧಿ ಪ್ರತಿಭಟನೆಗೆ ಡಿಎಸ್ಸೆಸ್ ಬೆಂಬಲ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಭೀಮ್ ರಾಜ್ಯ ದಲಿತ್ ಸೇವಾ ಸಮಿತಿ (ರಿ.), ವಿಜಯಪುರ ಜಿಲ್ಲಾ ಘಟಕದ ವತಿಯಿಂದ ನವದೆಹಲಿಯ ಜಂತರ್ ಮಂತರ್‌ನಲ್ಲಿ ನಡೆಯುತ್ತಿರುವ ನೀಟ್ (ಓಇಇಖಿ) ಪರೀಕ್ಷೆ ವಿರೋಧಿ ಬೃಹತ್ ಪ್ರತಿಭಟನೆಗೆ ಬೆಂಬಲ ಸೂಚಿಸಿ, ಜಿಲ್ಲಾಧ್ಯಕ್ಷ ನಾಗರಾಜ ಕಬಾಡೆ ಅವರ ನೇತೃತ್ವದಲ್ಲಿ ಜಿಲ್ಲಾಧಿಕಾ-ರಿಗಳ ಮೂಲಕ ಗೌರವಾನ್ವಿತ ರಾಷ್ಟ್ರಪತಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಮನವಿಯಲ್ಲಿ, ನೀಟ್ ಪರೀಕ್ಷೆಗೆ ಸಂಬಂಧಿಸಿದಂತೆ ದೇಶದಾದ್ಯಂತ ವಿದ್ಯಾರ್ಥಿಗಳು, ಪೋಷಕರು ಹಾಗೂ ವಿವಿಧ ಸಾಮಾಜಿಕ ಸಂಘಟನೆಗಳು ವ್ಯಕ್ತಪಡಿಸುತ್ತಿರುವ ಆತಂಕವನ್ನು ಗಂಭೀರವಾಗಿ ಪರಿಗಣಿಸಿ, ವಿದ್ಯಾರ್ಥಿಗಳಿಗೆ ಸಮಾನ ಶಿಕ್ಷಣದ ಅವಕಾಶ, ಸಾಮಾಜಿಕ ನ್ಯಾಯ ಹಾಗೂ ಸಂವಿಧಾನಬದ್ಧ ಹಕ್ಕುಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ.ಈ ಸಂದರ್ಭದಲ್ಲಿ ರಾಜ್ಯಾಧ್ಯಕ್ಷ ಅಪ್ಪುರಾಜ್ ನಿಮಾದಾರ, ರಾಜ್ಯ ಪ್ರಧಾನ ಕಾರ್ಯದರ್ಶಿ ಸೋಮಶೇಖರ ಕಬಾಡೆ, ಪದಾಧಿಕಾ-ರಿಗಳಾದ ವಿಜಯಕುಮಾರ ನಿಮಾದಾರ, ಕಿರಣ-ಕುಮಾರ ಅಲಿಯಾಬಾದ ರಾಘವೇಂದ್ರ ಕಾಸೆ, ನೀಲಾಂಬಿಕಾ ಕಟ್ಟಿಮನಿ, ಶಿಲ್ಪಾ ಮೇತ್ರಿ, ಅಬ್ದುಲ್ ಹಕ್ ಇನಾಮದಾರ ಸೇರಿದಂತೆ ಸದಸ್ಯರು, ಕಾರ್ಯಕರ್ತರು ಉಪಸ್ಥಿತರಿದ್ದರು.




# ಬಿಎಲ್ಡಿಇ ಎಸ್.ಎಸ್.ಎಂ ಕಾಲೇಜ ಆಫ್ ಫಾರ್ಮಸಿಗೆ 2ನೇ ಸ್ಥಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಪ್ರತಿಷ್ಠಿತ ಬಿ. ಎಲ್. ಡಿ. ಇ ಸಂಸ್ಥೆಯ ಎಸ್.ಎಸ್.ಎಂ ಕಾಲೇಜ ಆಫ್ ಫಾರ್ಮಸಿ ಂಡ್ ರಿಸರ್ಚ್ ಕಾಲೇಜು ರಾಷ್ಟ್ರೀಯ ಅತ್ಯುತ್ತಮ ಫಾರ್ಮಸಿ ಕಾಲೇಜುಗಳಲ್ಲಿ 2ನೇ ಸ್ಥಾನ ಪಡೆದಿದೆ.

ದೇಶದ ಹೆಸರಾಂತ ನಿಯತಕಾಲಿಕ ಔಟಲುಕ್ ಐಸಿಎಆರ್‌ಇ- 2026 ನಡೆಸಿದ ರಾಷ್ಟ್ರೀಯ ಸಮೀಕ್ಷೆಯಲ್ಲಿ ಈ ರ್‍ಯಾಂಕ್ ಲಭಿಸಿದೆ. ಕಳೆದ ವರ್ಷ ಕಾಲೇಜಿಗೆ 3ನೇರ್‍ಯಾಂಕ್ ಲಭಿಸಿತ್ತು. ಈಗ ಒಂದು ಸ್ಥಾನ ಹೆಚ್ಚಿಗೆ ಬಂದಿದ್ದು 2ನೇ ರ್‍ಯಾಂಕ್‌ಸಿಕ್ಕಿದೆ.

ಈಗಾಗಲೇ ನ್ಯಾಕ್ ನಿಂದ ಂ++ ಮಾನ್ಯತೆ ಪಡೆದ ಮೊದಲ ಕಾಲೇಜು ಎಂಬ ಹೆಗ್ಗಳಿಗೆ ಹೊಂದಿರುವ ಈ ಕಾಲೇಜಿನ ಕಿರೀಟಕ್ಕೆ ಈಗ ಮತ್ತೊಂದು ಗರಿ ಸಿಕ್ಕಂತಾಗಿದೆ.

ಕಾಲೇಜಿನಲ್ಲಿ ಬೋಧನೆ, ಕಲಿಕಾ ವಾತಾವರಣ, ವಿದ್ಯಾರ್ಥಿಗಳಿಗೆ ಪಠ್ಯ, ಪ್ರಾಯೋಗಿ ಹಾಗೂ ಪಠ್ಯೇತರ ಚಟುವಟಿಕೆಗಳಿಗೆ ನೀಡಲಾಗಿರುವ ಸೌಲಭ್ಯಗಳನ್ನು ಪರಿಗಣಿಸಿ ಈ ರ್‍ಯಾಂಕ್ ನೀಡಲಾಗಿದೆ

ಕಾಲೇಜಿನ ಸಾಧನೆಗೆ ಬಿ. ಎಲ್. ಡಿ. ಇ ಸಂಸ್ಥೆಯ ಅಧ್ಯಕ್ಷ ಮತ್ತು ಸಚಿವ ಎಂ. ಬಿ. ಪಾಟೀಲ, ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ, ಡೀಮ್ಡ್ ವಿವಿ ರಜಿಸ್ಟ್ರಾರ್ ಮತ್ತು ಸಂಸ್ಥೆಯ ಮುಖ್ಯ ಸಲಹೆಗಾರ ಡಾ. ಆರ್. ವಿ. ಕುಲಕರ್ಣಿ ಸಂತಸ ವ್ಯಕ್ತಪಡಿಸಿದ್ದು, ಕಾಲೇಜಿನ ಎಲ್ಲ ಬೋಧಕ ಮತ್ತು ಬೋಧಕರ ಹೊರತಾದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯ ಡಾ. ಸಿ. ಮಲ್ಲಿಕಾರ್ಜುನ ಶೆಟ್ಟಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜು.27 ರಂದು ಡಾ.ಹಳಕಟ್ಟಿ, ಬಂಥನಾಳ ಶ್ರೀ & ಬಂಗಾರಮ್ಮ ಸ್ಮರಣೆ ಕಾರ್ಯಕ್ರಮ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಬಿ.ಎಲ್.ಡಿ.ಇ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ಡಾ.ಫ.ಗು.ಹಳಕಟ್ಟಿ, ಬಂಥನಾಳ ಸಂಗನಬಸವ ಶಿವಯೋಗಿಗಳು, ಬಿ.ಎಂ.ಪಾಟೀಲ ಹಾಗೂ ಬಂಗಾರಮ್ಮ ಸಜ್ಜನ ಅವರ ಸ್ಮರಣೆ ಕಾರ್ಯಕ್ರಮ ದಿ.27 ಸೋಮವಾರ ಬೆ.10ಗಂ. ಬಿ.ಎಂ.ಪಾಟೀಲ ವೈದ್ಯಕೀಯ ಕಾಲೇಜು ಗ್ರಂಥ-ಾಲಯ ಸಭಾಂಗಣದಲ್ಲಿ ಚಿಂತನ-ಸಾಂಸ್ಕೃತಿಕ ಬಳಗದ ವತಿಯಿಂದ ಆಯೋಜಿಸಲಾಗಿದೆ.

ಶಿವಮೊಗ್ಗ ಬೆಕ್ಕಿನ ಕಲ್ಮಠ ಮ.ನಿ.ಪ್ರ.ಸ್ವ ಜಗದ್ಗುರು ಡಾ.ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದಾರೆ. ಬೆಳಗಾವಿ ಕೆ.ಎಲ್.ಇ ವಿಶ್ವವಿದ್ಯಾಲಯ ಪ್ರಾಧ್ಯಾಪಕ ಡಾ.ಅವಿನಾಶ ಕವಿ ಅವರು ಅರಿವಿನ ಕುರುಹು, ಇಷ್ಟಲಿಂಗ ವೈಜ್ಞಾನಿಕ ಒಳನೋಟ ವಿಷಯದ ಕುರಿತು ಉಪನ್ಯಾಸ ನೀಡಲಿದ್ದಾರೆ. ಕೈಗಾರಿಕೆ ಸಚಿವ, ಬಿ.ಎಲ್.ಡಿ.ಇ ಅಧ್ಯಕ್ಷ ಎಂ.ಬಿ.ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಚಿಂತನ ಬಳಗ ಕಾರ್ಯದರ್ಶಿ ಡಾ.ಮಹಾಂತೇಶ ಬಿರಾದಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮುಳವಾಡ ಕೈಗಾರಿಕಾ ಪ್ರದೇಶಕ್ಕೆ ಡಿಸಿ ಡಾ.ಆನಂದ.ಕೆ ಭೇಟಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲೆಯ ಕೊಲ್ಹಾರ ತಾಲೂಕಿನ ಮುಳವಾಡ ಹೊರವಲಯದಲ್ಲಿರುವ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆ.ಐ.ಎ.ಡಿ.ಬಿ) ಕೈಗಾರಿಕಾ ಪ್ರದೇಶಕ್ಕೆ ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ಶುಕ್ರವಾರ ಭೇಟಿ ನೀಡಿ ಹಂತ-1 ಹಂತ-2 ಹಾಗೂ ಹಂತ-3 ರಲ್ಲಿ ಈಗಾಗಲೇ ಅಭಿವೃದ್ಧಿಪಡಿಸಲಾದ ಕೈಗಾ-ರಿಕಾ ಪ್ರದೇಶದ ನಿವೇಶನಗಳು ಹಾಗೂ ಮೂಲ ಸೌಕರ್ಯಗಳನ್ನು ಪರಿಶೀಲಿಸಿದರು.

ನಂತರ ಹೊಸದಾಗಿ ರಾಜ್ಯ ಮಟ್ಟದಲ್ಲಿ ಅನುಮೋದನೆಯಾದ ಮೆ: ರಿಲಾಯನ್ಸ್ ಕನ್ಸೂಮರ್ ಪ್ರೋಡಕ್ಟ್ ಲಿಮಿಟೆಡ್ ಬೆಂಗಳೂರು ಇವ-ರಿಂದ 1622 ಕೋಟಿ ರೂ. ಯೋಜನಾ ವೆಚ್ಚದಲ್ಲಿ, ಸುಮಾರು 1200 ಜನರಿಗೆ ಉದ್ಯೋಗಾವಕಾಶ ಕಲ್ಪಿಸಲಿರುವ ಪ್ಯಾಕೇಜ್ಡ್ ಕಾರ್ಬೋನೇಟೆಡ್ ಸಾಫ್ಟಡ್ರಿಂಕ್ಸ್ ಅಂಡ್ ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್ ಘಟಕದ ಸ್ಥಳ ವೀಕ್ಷಿಸಿದರು.

ಬಳಿಕ ಪ್ರಗತಿ ಹಂತದಲ್ಲಿರುವ ಸುಮಾರು 25 ಕೋಟಿ ರೂ. ಯೋಜನಾ ವೆಚ್ಚದಲ್ಲಿ ಸ್ಥಾಪನೆಗೊಳ್ಳಲಿರುವ ಮೆ: ಚತುರ್ಮುಖಿ ಡೇರಿ ಪ್ರೋಡಕ್ಟ್ ಐಸ್ ಕ್ರೀಂ ಉತ್ಪಾದನಾ ಘಟಕ ಪರಿಶೀಲಿಸಿದರು.

ಭೇಟಿಯ ವೇಳೆ ಕೈಗಾರಿಕಾ ಪ್ರದೇಶದಲ್ಲಿನ ರಸ್ತೆ, ಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಪೂರೈಕೆ, ಬೀದಿ ದೀಪಗಳು, ಹಸಿರು ಪ್ರದೇಶ ಹಾಗೂ ಇತರೆ ಮೂಲಭೂತಸೌಕರ್ಯಗಳ ಸ್ಥಿತಿಗತಿಗಳ ಕುರಿತು ಕೈಗಾರಿಕೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಕೈಗಾರಿಕೆಗಳಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುವಂತೆ, ಹಾಗೂ ಕೈಗಾರಿಕಾ ಪ್ರದೇಶದ ಅಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ನಿರಂತರವಾಗಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಮುಳವಾಡ ಕೈಗಾರಿಕಾ ಪ್ರದೇಶದ ಹಂತ-1, ಹಂತ-2 ಈಗಾಗಲೇ ಅಭಿವೃದ್ಧಿಗೊಂಡಿದ್ದು, ವಿವಿಧ ಕೈಗಾರಿಕೆಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಈ ಕೈಗಾರಿಕಾ ಪ್ರದೇಶವು ಕೈಗಾರಿಕೆಗಳ ಸ್ಥಾಪನೆಗೆ ಸೂಕ್ತ ಸ್ಥಳವಾಗಿದ್ದು, ಕೈಗಾ-ರಿಕೆಗಳಿಗೆ ಅಗತ್ಯವಿರುವ ಮೂಲಸೌಕರ್ಯ ನಿರ್ವಹಣೆ ಮತ್ತು ಮುಂದಿನ ಅಭಿವೃದ್ಧಿ ಕಾರ್ಯಗಳ ಕುರಿತು ಅಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ವಿವರಿಸಿದರು.

ಈ ಸಂದರ್ಭದಲ್ಲಿ ಕೆ.ಐ.ಎ.ಡಿ.ಬಿಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಜಿಲ್ಲಾ ಕೈಗಾರಿಕಾ ಕೇಂದ್ರದ ಸಹಾಯಕ ಅಭಿಯಂತರರು ಹಾಗೂ ಜಂಟಿ ನಿರ್ದೇಶಕರು ಉಪಸ್ಥಿತರಿದ್ದರು.

# ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ಎಚ್‌ಪಿವಿ ಲಸಿಕೆ :ಡಾ.ಮಾಗಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಎಚ್‌ಪಿವಿ ಲಸಿಕೆ ಆಧುನಿಕ ಜೈವಿಕ ತಂತ್ರಜ್ಞಾನದ ಮೆಡಿಕಲ್ ಡೋಸ್ ಎಂದು ಹೇಳಬಹುದಾಗಿದೆ. ಶಿಫಾರಸು ಮಾಡಿರುವ ವಯಸ್ಸಿನಲ್ಲಿ ಲಸಿಕೆಯನ್ನು ನೀಡಿದಾಗ, ವೈರಸ್ ದೇಹವನ್ನು ಪ್ರವೇಶಿಸುವ ಮೊದಲು, ಅಂದರೆ ಸೂಕ್ತ ವಯಸ್ಸಿನಲ್ಲಿ(ಪ್ರಮುಖವಾಗಿ 9 ರಿಂದ 14 ವರ್ಷದೊಳಗೆ) ಈ ಲಸಿಕೆಯನ್ನು ನೀಡಿದರೆ, ಶೇ 90 ರಷ್ಟು ಗರ್ಭಕಂಠದ ಕ್ಯಾನ್ಸರ್ ಪ್ರಕರಣಗಳನ್ನು ತಡೆಗಟ್ಟಬಹುದು ಎಂದು ನಗರ ವೈದ್ಯಾಧಿಕಾರಿ ಅಬ್ದುಲ್‌ಅಹಿದ್ ಮಾಗಿಯವರು ಹೇಳಿದರು.

ಶುಕ್ರವಾರದಂದು ನಗರದ ಬಂಜಾರಾ ಪ್ರೌಢ ಶಾಲೆ ಹಾಗೂ ಎಪಿಎಂಸಿಯ ನಗರ ಆರೋಗ್ಯ ಕೇಂದ್ರ ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ 14 ವರ್ಷದೊಳಗಿನ ವಿದ್ಯಾರ್ಥಿನಿಯರಿಗೆ ಎಚ್‌ಪಿವಿ ವ್ಯಾಕ್ಸಿನ್‌ಗೆ ಚಾಲನೆ ನೀಡಿ ಮಾತನಾಡಿದ ಅವರು. ಇದು ಕೇವಲ ಆರೋಗ್ಯ ರಕ್ಷಣೆಯಲ್ಲ, ಇದೊಂದು ಸಬಲೀಕರಣದ ಯೋಜನೆ. ಸಮಯೋಚಿತವಾಗಿ ಲಸಿಕೆಯನ್ನು ಆರಿಸಿಕೊಳ್ಳುವ ಮೂಲಕ, ನಾವು ಭಯದ ಜಾಗದಲ್ಲಿ ಭರವಸೆಯನ್ನು ಮತ್ತು ಅನಿಶ್ಚಿತತೆಯ ಜಾಗದಲ್ಲಿ ಆತ್ಮವಿಶ್ವಾಸವನ್ನು ಮೂಡಿಸಬಹುದು. ಕ್ಯಾನ್ಸರ್ ಎಂಬ ಮಹಾಮಾರಿಯು ಜೀವವನ್ನು ಕಿತ್ತುಕೊಳ್ಳುವ ಮೊದಲೇ ಅದನ್ನು ಹತ್ತಿಕ್ಕುವ ಶಕ್ತಿ ಈ ಲಸಿಕೆಗಿದೆ ಎನ್ನುವುದು ಗಮನಿಸಬೇಕಾದ ವಿಚಾರ ಎಂದರು.

ಆರೋಗ್ಯ ನಿರೀಕ್ಷಣಾಧಿಕಾರಿ ಸಿದ್ದು ಹಿರೇಕುರುಬರ ಮಾತನಾಡುತ್ತ. ಲಸಿಕೆಯ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ದೂರ ಮಾಡಿ, ವೈಜ್ಞಾನಿಕ ಪುರಾವೆಗಳನ್ನು ಜನರಿಗೆ ತಲುಪಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು.

ಶಾಲೆಯ ಮುಖ್ಯಗುರು ಇ.ಡಿ.ಲಮಾಣಿ ಮಾತನಾಡಿದರು.

ಈ ವೇಳೆಯಲ್ಲಿ ಪ್ರಾಥಮಿಕ ಸುರಕ್ಷಣಾಧಿಕಾರಿ ಜ್ಯೋತಿ ಲಾಳಸಂಗಿ, ಆರೋಗ್ಯ ಸಿಬ್ಬದಿಗಳಾದ ಸವಿತಾ ಸಜ್ಜನ, ಗಿರಿಜಾ ಹೂಗಾರ, ಹೀನಾ ಜಮಾದಾರ, ಸುರೇಖಾ ಆಹೇರಿ, ಸುಧಾ ಚಲವಾದಿ ಹಾಗೂ ಆಶಾ ಕಾರ್ಯಕರ್ತೆಯರಾದ ಚಂದ್ರಕಲಾ ಹೊಸಮನಿ, ಆರತಿ ಸಾವಳಗಿ, ಪವಿತ್ರಾ ಬಡಿಗೇರರವರು ಸೇರಿದಂತೆ ಶಾಲಾ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತ-ರಿದ್ದರು.

# ಯುಪಿಎಸ್‌ಸಿ ಪರೀಕ್ಷಾ ಪೂರ್ವ ತರಬೇತಿಗೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು 2026-27ನೇ ಸಾಲಿನ ಯು.ಪಿ.ಎಸ್.ಸಿ ನಾಗರಿಕ ಸೇವಾ ಪರೀಕ್ಷೆಗಳ ಉಚಿತ ಪೂರ್ವಭಾವಿ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಹಿಂದುಳಿದ ವರ್ಗಗಳ ಪ್ರವರ್ಗ-1, 2(ಎ), 3(ಎ) ಹಾಗೂ 3(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಸೌಲಭ್ಯದೊಂದಿಗೆ ಈ ತರಬೇತಿ ನೀಡಲಾಗುತ್ತದೆ.

ಅಭ್ಯರ್ಥಿಗಳು ಯಾವುದೇ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಪೂರ್ಣಗೊಳಿಸಿರಬೇಕು. ವರ್ಗ: ಪ್ರವರ್ಗ-1, 2(ಎ), 3(ಎ) ಹಾಗೂ 3(ಬಿ) ಗೆ ಸೇರಿದ ಅಭ್ಯರ್ಥಿಗಳು ಮಾತ್ರ ಅರ್ಹರು.ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳು, ಪ್ರವರ್ಗ ಹಾಗೂ ಮೀಸಲಾತಿ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ.

ಆಯ್ಕೆಯಾದ ಅಭ್ಯರ್ಥಿಗಳಿಗೆ ಇಲಾಖೆಯಿಂದಲೇ ಉಚಿತ ಊಟ ಮತ್ತು ವಸತಿ ವ್ಯವಸ್ಥೆ ಇರುವುದರಿಂದ ಪ್ರತ್ಯೇಕವಾಗಿ ಯಾವುದೇ ತರಬೇತಿ ಭತ್ಯೆ ನೀಡಲಾಗುವುದಿಲ್ಲ.

ಆಗಸ್ಟ್ 3 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದೆ. bcwd.karnataka.gov.in-sevasi ndhuservices.karnataka.gov.in ಹಾಗೂ ಹೆಚ್ಚಿನ ಮಾಹಿತಿಗಾಗಿ 8050770004 ಸಂಖ್ಯೆಯನ್ನು ಸಂಪರ್ಕಿಸಬಹುದು ಪರೀಕ್ಷಾ ಕೇಂದ್ರ, ದಿನಾಂಕ ಮತ್ತು ಸಮಯದ ವಿವರಗಳನ್ನು ಮುಂದಿನ ದಿನಗಳಲ್ಲಿ ಇಲಾಖೆಯ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗುವುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪ್ರಕಟಣೆ ತಿಳಿಸಿದೆ.

### ಚುರುಕಾದ ಮತದಾರರ ಪಟ್ಟಿಯ ಮನೆ ಮನೆ ಗಣತಿ ಕಾರ್ಯ । ಜಿಲ್ಲಾಧಿಕಾರಿ ಡಾ. ಆನಂದ ಕೆ ಮಾಹಿತಿ

# 14.83 ಲಕ್ಷ ನಮೂನೆಗಳ ಡಿಜಿಟಲೀಕರಣ ಪೂರ್ಣ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ ಮತ್ತು ಗಣತಿ ಕಾರ್ಯ ಭರದಿಂದ ನಡೆದಿದ್ದು, 14.83 ಲಕ್ಷ ನಮೂನೆಗಳ ಡಿಜಿಟಲೀಕರಣ ಕಾರ್ಯ ಪೂರ್ಣಗೊಂಡಿದೆ ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ತಿಳಿಸಿದ್ದಾರೆ.

ಜೂನ್ 16, 2026ರಲ್ಲಿದ್ದಂತೆ ಒಟ್ಟು 19,82,114 ಮತದಾರರಿದ್ದು, ಇವರಿಗೆ ಸಂಬಂಧಿಸಿದ ಗಣತಿ ನಮೂನೆಗಳನ್ನು ಮುದ್ರಿಸಿ ಬಿ.ಎಲ್.ಓ ಗಳಿಗೆ ವಿತ-ರಿಸಲಾಗಿದೆ. ಮನೆ ಮನೆ ಗಣತಿ ಹಾಗೂ ಡಿಜಿಟಲೀಕರಣ ಪ್ರಕ್ರಿಯೆಯು ಜೂನ್ 30, 2026 ರಿಂದ ಆಗಸ್ಟ್ 08, 2026 ರವರೆಗೆ ನಡೆಯಲಿದೆ ಎಂದವರು ತಿಳಿಸಿದ್ದಾರೆ. ಪ್ರಸ್ತುತ ಗಣತೀಕರಣದ ಸ್ಥಿತಿ (ಜುಲೈ 24, 2026ರ ಸಂಜೆ 6:00 ಗಂಟೆಯ ವೇಳೆಗೆ): ಒಟ್ಟು ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ 14,83,502 ನಮೂನೆಗಳ ಡಿಜಿಟಲೀಕರಣ ಕಾರ್ಯ ಪೂರ್ಣಗೊಂಡಿದೆ ಎಂದವರು ತಿಳಿಸಿದ್ದಾರೆ. ಆನ್‌ಲೈನ್‌ನಲ್ಲಿ ಸಾರ್ವಜನಿಕರು ಸಲ್ಲಿಸಿದ ನಮೂನೆಗಳು: 3,867, ಸಂಗ್ರಹಿಸಲಾಗದ/ಗೈರುಹಾಜರಾದ ಮತದಾರರು: 19,987, ಶಾಶ್ವತವಾಗಿ ಸ್ಥಳಾಂತರಗೊಂಡ ಮತದಾರರು: 61,247, ಮರಣ ಹೊಂದಿರುವ ಮತದಾರರು: 35,705, ಈಗಾಗಲೇ ನೋಂದಾಯಿಸಿಕೊಂಡ ಮತದಾರರು: 14,729 ಹಾಗೂ ಇತರೆ: 422

ಜಿಲ್ಲೆಯ 8 ವಿಧಾನಸಭಾ ಕ್ಷೇತ್ರಗಳಾದ ಮುದ್ದೇಬಿಹಾಳ, ದೇವರಹಿಪ್ಪರಗಿ, ಬಸವನ ಬಾಗೇವಾಡಿ, ಬಬಲೇಶ್ವರ, ವಿಜಯಪುರ ನಗರ, ನಾಗಠಾಣ, ಇಂಡಿ ಹಾಗೂ ಸಿಂದಗಿ ಕ್ಷೇತ್ರಗಳಲ್ಲಿ ಒಟ್ಟು 2,092 ಮತಗಟ್ಟೆಗಳ ವ್ಯಾಪ್ತಿಯಲ್ಲಿ ಪರಿಶೀಲನೆ ನಡೆಸಲಾಗುತ್ತಿದೆ. ಸಾರ್ವಜನಿಕರು ಹಾಗೂ ಮತದಾರರು ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕೃತ ವೆಬ್‌ಸೈಟ್ vijayapura.nic.in ಗೆ ಭೇಟಿ ನೀಡಬಹುದು ಎಂದು ಜಿಲ್ಲಾಡಳಿತ ತಿಳಿಸಿದೆ.

# ಕೊಲ್ಹಾರದಲ್ಲಿ ಆಧಾರ್ ಸೇವೆ ಸ್ಥಗಿತ: ಸಾರ್ವಜನಿಕರ ಪರದಾಟ

■ ಉದಯರಶ್ಮಿ ದಿನಪತ್ರಿಕೆ




ಕೊಲ್ಹಾರ: ತಾಲೂಕಿನ ಸುತ್ತಮುತ್ತಲಿನ ಗ್ರಾಮಗಳಿಂದ ಪ್ರತಿದಿನ ನೂರಾರು ಜನರು ಆಧಾರ್ ಕಾರ್ಡ್ ನೋಂದಣಿ ಹಾಗೂ ತಿದ್ದುಪಡಿಗಾಗಿ ತಾಲೂಕು ಕೇಂದ್ರಕ್ಕೆ ಆಗಮಿಸುತ್ತಿದ್ದರೂ ಸಮರ್ಪಕ ಸೇವೆ ದೊರೆಯುತ್ತಿಲ್ಲ ಎಂದು ಸಾರ್ವಜನಿಕರು ದೂರಿದ್ದಾರೆ.

ತಾಲೂಕು ಕೇಂದ್ರದಲ್ಲಿ ಒಂದೇ ಒಂದು ಆಧಾರ್ ಸೇವಾ ಕೇಂದ್ರ ಇದ್ದು ಅದು ಕೂಡಾ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಹಲವು ದಿನಗಳಿಂದ ಆಧಾರ ಕೇಂದ್ರ ಮುಚ್ಚಿರುವುದು ಸಾರ್ವಜನಿಕರು, ಮಹಿಳೆಯರು, ವಿದ್ಯಾರ್ಥಿಗಳು ಹಾಗೂ ಹಿರಿಯ ನಾಗ-ರಿಕರು ತೊಂದರೆ ಅನುಭವಿಸುವಂತಾಗಿದೆ.

ಆಧಾರ್ ಸೇವೆ ವಿಳಂಬವಾಗುತ್ತಿರುವುದರಿಂದ ವಿದ್ಯಾರ್ಥಿಗಳ ದಾಖಲಾತಿ, ಸರ್ಕಾರಿ ಯೋಜನೆಗಳ ಸೌಲಭ್ಯ ಹಾಗೂ ಹಿರಿಯ ನಾಗರಿಕರ ಪಿಂಚಣಿ ಪ್ರಕ್ರಿಯೆಗಳಿಗೂ ಅಡಚಣೆ ಉಂಟಾಗಿದೆ. ಆಧಾರ್ ಕಾರ್ಡ್ ಸಲುವಾಗಿ ಜನರು ಬೀಳಗಿ, ವಿಜಯಪುರ ಹಾಗೂ ಬಸವನ ಬಾಗೇವಾಡಿಗೆ ತೆರಳಬೇಕಾದ ಅನಿವಾರ್ಯತೆ ಎದುರಾಗಿದೆ. ಆದ್ದರಿಂದ ಕೊಲ್ಹಾರ ಪಟ್ಟಣದಲ್ಲಿ ಶಾಶ್ವತ ಹಾಗೂ ಪೂರ್ಣಾವಧಿ ಆಧಾರ್ ಸೇವಾ ಕೇಂದ್ರ ಆರಂಭಿಸಿ ಸಾರ್ವಜನಿಕರಿಗೆ ನಿರಂತರ ಸೇವೆ ಒದಗಿಸಬೇಕು ಎಂದು ಅಖಂಡ ಕರ್ನಾಟಕ ರಾಜ್ಯ ರೈತ ಸಂಘ ತಾಲೂಕು ಅಧ್ಯಕ್ಷ ರಮೇಶ ಬಾಲಗೊಂಡ , ಕರವೇ ತಾಲೂಕು ಅಧ್ಯಕ್ಷ ರವಿ ಗೋಳಸಂಗಿ, ಮಲ್ಲಿಕಾರ್ಜುನ ಗಣಿ, ಸಂಗಪ್ಪ ಕೋಟಿ, ಈರಣ್ಣ, ಸಂತೋಷ ಸೇರಿದಂತೆ ಹಲವರು ಆಗ್ರಹಿಸಿದ್ದಾರೆ.

"ನೆಟ್‌ವರ್ಕ್ ಸಮಸ್ಯೆಯಿಂದಾಗಿ ಎಂಟು ದಿನಗಳಿಂದ ಬಂದ್ ಇತ್ತು. ಆದ-ರೆ ಆಪರೇಟರ್ ಒಂದು ತಿಂಗಳಿನಿಂದ ಗೈರಾಗಿದ್ದರೆ, ಅವರನ್ನು ಕರೆಸಿ ವಿಚಾ-ರಿಸಲಾಗುವುದು"

■ **ಸಂತೋಷ್ ಮ್ಯಾಗೇರಿ**
**ತಹಶೀಲ್ದಾರ ಕೊಲ್ಹಾರ**

ತಾಲೂಕು ಕೇಂದ್ರದಲ್ಲಿ ತಿಂಗಳುಗಳಿಂದ ಆಧಾರ್ ಸೇವಾ ಕೇಂದ್ರ ಬಂದ್ ಆಗಿರುವುದರಿಂದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ತಿದ್ದುಪಡಿಗಾಗಿ ಅಲೆದಾಡುವಂತಾಗಿದೆ. ಕೂಡಲೇ ಪ್ರಾರಂಭಿಸಿ
**ಸ್ಥಳಿಯ ನಿವಾಸಿ ಸಂಗಪ್ಪ ಕೋಟಿ**

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR